# ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು.




## 58ನೇ ವಾರ್ಷಿಕ ವರದಿ

## 2022-23




ದಿನಾಂಕ
20.09.2023





ಮಹಾಮಂಡಳದ 57ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಛಾಯಾಚಿತ್ರಗಳು





ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ ಮಹಾಮಂಡಳದ 46ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ





69ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭ – 2022

## ಆಡಳಿತ ಮಂಡಳಿ ನಿರ್ದೇಶಕರು



ಶ್ರೀ ಎಚ್.ಕೆ. ಪಾಟೀಲ
ಅಧ್ಯಕ್ಷರು



ಶ್ರೀ ಪರಮಶಿವಯ್ಯ ಬಿ.ಎಸ್.
ಉಪಾಧ್ಯಕ್ಷರು



ಶ್ರೀ ಡಿ.ಟಿ. ಪಾಟೀಲ
ನಿರ್ದೇಶಕರು



ಶ್ರೀ ರುದ್ರೇಗೌಡ
ನಿರ್ದೇಶಕರು



ಶ್ರೀ ಅಶೋಕ ಮಲ್ಲಪ್ಪ ಮನಗೂಳಿ
ನಿರ್ದೇಶಕರು



ಶ್ರೀ ಕೃಷ್ಣ ಹೆಚ್.ಸಿ.
ನಿರ್ದೇಶಕರು



ಶ್ರೀ ಕೋಗುಂಡಿ ಬಕ್ಕೇಶಪ್ಪ
ನಿರ್ದೇಶಕರು



ಶ್ರೀ ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ
ನಿರ್ದೇಶಕರು



ಶ್ರೀ ಹರೀಶ್ ಆಚಾರ್
ನಿರ್ದೇಶಕರು



ಶ್ರೀ ಕೃಷ್ಣಮೂರ್ತಿ ಭಂಡಾರಿ
ನಿರ್ದೇಶಕರು



ಶ್ರೀ ರಾಘವ ವಿಷ್ಣು ಬಾಳೇರಿ
ನಿರ್ದೇಶಕರು



ಶ್ರೀ ಮಲಕಣ್ಣ ಡಿ. ಪಾಟೀಲ
ನಿರ್ದೇಶಕರು



ಶ್ರೀ ರಾಜಕುಮಾರ ಬಸವರಾಜ ಬಾದವಾಡಗಿ
ನಿರ್ದೇಶಕರು



ಶ್ರೀ ನಿರಂಜನ್ ಟಿ.ಎಸ್.
ನಿರ್ದೇಶಕರು



ಶ್ರೀ ವಾಸು ಹೆಚ್.
ನಿರ್ದೇಶಕರು



ಡಾ. ಎಂ.ಬಿ. ಮಂಜೇಗೌಡ
ನಿರ್ದೇಶಕರು

## ಆಡಳಿತ ಮಂಡಳಿ ನಿರ್ದೇಶಕರು



ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ
ನಿರ್ದೇಶಕರು



ಶ್ರೀಮತಿ ವೀರಮ್ಮ ಪಿ.
ನಿರ್ದೇಶಕರು



ಶ್ರೀ ಕೆ. ರಾಜೇಂದ್ರ, ಭಾ.ಆ.ಸೇ.
ಸಹಕಾರ ಸಂಘಗಳ ನಿಬಂಧಕರು



ಶ್ರೀ ರಮೇಶ್ ಬಾಬು
ವಿಶೇಷ ಆಹ್ವಾನಿತರು



ಶ್ರೀ ಎಂ.ಕೆ. ಪಟ್ಟಣಶೆಟ್ಟಿ
ವಿಶೇಷ ಆಹ್ವಾನಿತರು



ಶ್ರೀ ರಘುನಾಥ್ ಸಿ.
ವಿಶೇಷ ಆಹ್ವಾನಿತರು



ಶ್ರೀ ರಾಜಶೇಖರ್ ಎಸ್. ಹಾವಣಗಿ
ವಿಶೇಷ ಆಹ್ವಾನಿತರು



ಶ್ರೀ ಪುಂಡಲೀಕ ಎನ್. ಕೇರೂರೆ
ಮುಖ್ಯಕಾರ್ಯನಿರ್ವಹಣಾಧಿಕಾರಿ

## ಮಹಾಮಂಡಳದ ಸಹಕಾರ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು



ಶ್ರೀ ಪಿ.ಎಲ್. ವೆಂಕಟರಾಮರೆಡ್ಡಿ



ಶ್ರೀ ಎಂ.ಎಂ. ಮೆಟಗುಡ್ಡ



ಶ್ರೀ ಶರಣಪ್ಪ ಎಸ್. ವಾರದ



ಶ್ರೀ ಆರ್.ಎಸ್. ಸುಬ್ರಹ್ಮಣ್ಯ



ಶ್ರೀ ಬಿ.ಎನ್. ಲೋಕೇಶ್



ಶ್ರೀ ಚಂದ್ರಮೌಳಿ ಎಸ್.




ಶ್ರೀ ವಿಕ್ರಮ ಆರ್. ಸಿಗೂರ



ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ



ಡಾ. ಆರ್. ಇಳಂಗೋವನ್



ಶ್ರೀ ಸುಧಾಕರ್ ಭಟ್
ಬ್ಯಾಂಕಿಂಗ್ ಸಲಹೆಗಾರರು



ಶ್ರೀ ರವೀಂದ್ರ ಜಿ.ಎಂ.
(ಸಹಕಾರ ಸಂಘಗಳ ಅಪರ ನಿಬಂಧಕರು
(ನಿ.441) ದಾವಾ ಪಂಚಾಯಿತಿ
ನ್ಯಾಯಾಲಯ ಬೆಂಗಳೂರು



ಶ್ರೀ ಹೆಚ್.ವೈ. ಗದ್ದನಕೇರಿ
(ಸಹಕಾರ ಸಂಘಗಳ ಅಪರ ನಿಬಂಧಕರು
(ನಿ.441) ದಾವಾ ಪಂಚಾಯಿತಿ
ನ್ಯಾಯಾಲಯ ಹುಬ್ಬಳ್ಳಿ

## ಪರಿವಿಡಿ


58ನೇ ವಾರ್ಷಿಕ ಮಹಾಸಭೆಯ ನೋಟೀಸು ..... 6

ವಾರ್ಷಿಕ ಮಹಾಸಭೆಯ ಕಾರ್ಯಸೂಚಿ ವಿಷಯಗಳ ಮೇಲಿನ ಟಿಪ್ಪಣಿಗಳು ..... 7

ಅಧ್ಯಕ್ಷರ ಅನಿಸಿಕೆ ..... 8

ಕೃತಜ್ಞತೆಗಳು–ಅಭಿನಂದನೆಗಳು ..... 10

ಮಹಾಮಂಡಳದ 57ನೇ ವಾರ್ಷಿಕ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ನಡವಳಿಗಳು ..... 11

ಮಹಾಮಂಡಳದ ಕಾರ್ಯಚಟುವಟಿಕೆಗಳು ..... 18

ಮಹಾಮಂಡಳದ ತರಬೇತಿ ಹಾಗೂ ವಿಚಾರ ಸಂಕಿರಣಗಳ ವಿವರ ..... 22




# ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.
## Karnataka State Co-Operative Urban Banks Federation Ltd.

**ಸಂಖ್ಯೆ: ಪಬ್ಯಾಮ:ವಾಮಸ: 218: 2023–24** **ದಿನಾಂಕ : 28.08.2023**

## 58ನೇ ವಾರ್ಷಿಕ ಮಹಾಸಭೆಯ ನೋಟೀಸು

ಮಹಾಮಂಡಳದ 2022–23ನೇ ಸಾಲಿನ 58ನೇ ವಾರ್ಷಿಕ ಮಹಾಸಭೆಯನ್ನು 20ನೇ ಸೆಪ್ಟೆಂಬರ್ 2023ರ ಬುಧವಾರ ಬೆಳಗ್ಗೆ 11.30 ಗಂಟೆಗೆ ಮಹಾಮಂಡಳದ ದಿ॥ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆ.ಎಚ್. ರಸ್ತೆ, ಬೆಂಗಳೂರು – 560027 ಇಲ್ಲಿ ಈ ಕೆಳಗಿನ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳಲು ಏರ್ಪಡಿಸಲಾಗಿದೆ. ಆದ್ದರಿಂದ ಸಭೆಗೆ ಮಹಾಮಂಡಳದ ಅರ್ಹ ಸದಸ್ಯ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಬೇಕಾಗಿ ವಿನಂತಿಸಲಾಗಿದೆ.

### ಸಭೆಯ ವಿಷಯಗಳು

ವಿಷಯ 1 : ಸಭೆಯ ನೋಟೀಸನ್ನು ಓದಿ ದಾಖಲಿಸುವುದು.

ವಿಷಯ 2 : ದಿನಾಂಕ : 20.09.2022ರ ಸಾಲಿನ ಸಾಮಾನ್ಯ ಸಭೆಯ ನಡವಳಿಗಳನ್ನು ಪರಿಶೀಲಿಸಿ ದೃಢೀಕರಿಸುವುದು.

ವಿಷಯ 3 : ಮಂಡಲಿಯು ಮಂಡಿಸಿದ ಹಿಂದಿನ ವರ್ಷದ ವಾರ್ಷಿಕ ವರದಿಯ ಪರಿಗಣನೆ.

ವಿಷಯ 4 : 2022–23ನೇ ಸಾಲಿನಲ್ಲಿ ಜರುಗಿದ ತರಬೇತಿ/ವಿಚಾರ ಸಂಕಿರಣ ಕಾರ್ಯಕ್ರಮಗಳ ಪಟ್ಟಿಯನ್ನು ಪರಿಶೀಲಿಸಿ ಅನುಮೋದಿಸುವುದು.

ವಿಷಯ 5 : 2023–24ನೇ ಸಾಲಿಗೆ ತನ್ನ ಸದಸ್ಯ ಬ್ಯಾಂಕುಗಳಿಗೆ ಆಯೋಜಿಸಿರುವ ತರಬೇತಿ/ವಿಚಾರ ಸಂಕಿರಣ ಕಾರ್ಯಕ್ರಮಗಳ ಪಟ್ಟಿಯ ಅನುಮೋದನೆ.

ವಿಷಯ 6 : 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿ ಅನುಮೋದಿಸುವುದು.

ವಿಷಯ 7 : 2023–24ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ ಮತ್ತು ಸಂಭಾವನೆ ನಿರ್ಧರಣೆ.

ವಿಷಯ 8 : 2023–24ನೇ ಸಾಲಿನ ಅಂದಾಜು ಆಯವ್ಯಯಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಮತ್ತು ಕಳೆದ ಸಾಲಿನ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.

ವಿಷಯ 9 : ಮುನ್ಸೂಚನೆಯ ಮೇರೆಗೆ ಸಭಾಪತಿಯವರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ಮಹಾಮಂಡಳದ ಆಡಳಿತ ಮಂಡಳಿ ಪರವಾಗಿ

ಸಹಿ/–
(ಪುಂಡಲೀಕ ಎನ್. ಕೇರೂರೆ)
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಗೆ,
ಅಧ್ಯಕ್ಷರು / ಮುಖ್ಯಕಾರ್ಯನಿರ್ವಹಣಾಧಿಕಾರಿಗಳು
ರಾಜ್ಯದ ಎಲ್ಲಾ ಸದಸ್ಯ ಪಟ್ಟಣ ಸಹಕಾರ ಬ್ಯಾಂಕುಗಳು

---

**ವಿ.ಸೂಚನೆ :** 1) ಒಂದು ಬ್ಯಾಂಕಿನಿಂದ ಒಬ್ಬರು ಮಾತ್ರ ಮಹಾಸಭೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

2) ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ ಆರ್ಥಿಕ ತಃಖ್ತೆಯ ಪುಸ್ತಕಗಳನ್ನು ಪ್ರತ್ಯೇಕವಾಗಿ ಕಳುಹಿಸಿಕೊಡಲಾಗುವುದು.

3) ತಮ್ಮ ಬ್ಯಾಂಕಿನ ಆಡಳಿತ ಮಂಡಲಿಯ ಠರಾವಿನ ಪ್ರತಿಯನ್ನು ಮಹಾಮಂಡಳಕ್ಕೆ ಮುಂಚಿತವಾಗಿ ಒದಗಿಸತಕ್ಕದ್ದು.

4) ಸಭೆಯಲ್ಲಿ ಚರ್ಚಿಸುವ ವಿಷಯಗಳನ್ನು ದಿನಾಂಕ: 15/09/2023ರೊಳಗಾಗಿ ಮಹಾಮಂಡಳಕ್ಕೆ ಕಳುಹಿಸಿಕೊಡಲು ಕೋರಲಾಗಿದೆ.

## ವಾರ್ಷಿಕ ಮಹಾಸಭೆಯ ಕಾರ್ಯಸೂಚಿ ವಿಷಯಗಳ ಮೇಲಿನ ಟಿಪ್ಪಣಿಗಳು

ವಿಷಯ–1 : ಸಭೆಯ ನೋಟೀಸನ್ನು ಓದಿ ದಾಖಲಿಸುವುದು.

ಟಿಪ್ಪಣಿ : ದಿನಾಂಕ : 20.09.2023ರಂದು ಜರುಗಲಿರುವ 58ನೇ ವಾರ್ಷಿಕ ಮಹಾಸಭೆಯ ಮೀಟಿಂಗ್ ನೋಟಿಸ್‌ನ್ನು ಓದಿ ದಾಖಲು ಮಾಡಲು ವಾರ್ಷಿಕ ಮಹಾಸಭೆಯ ಮುಂದೆ ಮಂಡಿಸಲಾಗಿದೆ.

ವಿಷಯ–2 : ದಿನಾಂಕ : 20.09.2022ರಂದು ಜರುಗಿದ ಸಾಮಾನ್ಯ ಸಭೆಯ ನಡವಳಿಗಳನ್ನು ಪರಿಶೀಲಿಸಿ ದೃಢೀಕರಿಸುವುದು.

ಟಿಪ್ಪಣಿ : ದಿನಾಂಕ : 20.09.2022ರಂದು ಮಹಾಮಂಡಳದ 57ನೇ ವಾರ್ಷಿಕ ಮಹಾಸಭೆಯ ನಡವಳಿಗಳನ್ನು ಪರಿಶೀಲಿಸಿ ಅನುಮೋದಿಸುವುದು.

ವಿಷಯ–3 : ಮಂಡಲಿಯು ಮಂಡಿಸಿದ ಹಿಂದಿನ ವರ್ಷದ ವಾರ್ಷಿಕ ವರದಿಯ ಪರಿಗಣನೆ.

ಟಿಪ್ಪಣಿ : 2022–23ನೇ ಸಾಲಿನಲ್ಲಿ ಮಹಾಮಂಡಳವು ಸದಸ್ಯ ಬ್ಯಾಂಕುಗಳಿಗೆ ಒದಗಿಸಿರುವ ಸೇವೆ ಮತ್ತು ಕಾರ್ಯ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಪರಿಶೀಲಿಸಿ ಅನುಮೋದಿಸಲು ಮಂಡಿಸಲಾಗಿದೆ.

ವಿಷಯ–4 : 2022–23ನೇ ಸಾಲಿನಲ್ಲಿ ಜರುಗಿದ ತರಬೇತಿ/ವಿಚಾರ ಸಂಕಿರಣ ಕಾರ್ಯಕ್ರಮಗಳ ಪಟ್ಟಿಯನ್ನು ಪರಿಶೀಲಿಸಿ ಅನುಮೋದಿಸುವುದು.

ಟಿಪ್ಪಣಿ : 2022–23ನೇ ಸಾಲಿನಲ್ಲಿ ಮಹಾಮಂಡಳವು ತನ್ನ ಸದಸ್ಯ ಬ್ಯಾಂಕುಗಳ ಆಡಳಿತ ಮಂಡಲಿಯ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ಏರ್ಪಡಿಸಿದ್ದ ತರಬೇತಿ/ವಿಚಾರ ಸಂಕಿರಣ ವಿವರಗಳ ಪಟ್ಟಿಯನ್ನು ಪರಿಶೀಲಿಸಿ ಅನುಮೋದಿಸುವುದು.

ವಿಷಯ–5 : 2023–24ನೇ ಸಾಲಿಗೆ ತನ್ನ ಸದಸ್ಯ ಬ್ಯಾಂಕುಗಳಿಗೆ ಆಯೋಜಿಸಿರುವ ತರಬೇತಿ/ವಿಚಾರ ಸಂಕಿರಣ ಕಾರ್ಯಕ್ರಮಗಳ ಪಟ್ಟಿಯ ಅನುಮೋದನೆ.

ಟಿಪ್ಪಣಿ : 2023–24ನೇ ಸಾಲಿಗೆ ತನ್ನ ಸದಸ್ಯ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಆಯೋಜಿಸಿರುವ ತರಬೇತಿ/ವಿಚಾರ ಸಂಕಿರಣಗಳ ಪಟ್ಟಿಯನ್ನು ಪರಿಶೀಲಿಸಿ ಅನುಮೋದಿಸುವುದು.

ವಿಷಯ–6 : 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿ ಅನುಮೋದಿಸುವುದು.

ಟಿಪ್ಪಣಿ : 2022–23ನೇ ಸಾಲಿನ ಮಹಾಮಂಡಳದ ಲೆಕ್ಕಪತ್ರಗಳನ್ನು ಮೆ: ಎಂ.ಎಸ್.ಎಸ್.ವಿ & ಕಂಪನಿ ಚಾರ್ಟರ್ಡ್ ಅಕೌಂಟೆಂಟ್ ಇವರಿಂದ ಲೆಕ್ಕ ಪರಿಶೋಧನೆಯನ್ನು ಮಾಡಿಸಲಾಗಿದೆ. ಸದರಿ ಲೆಕ್ಕಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿ ಅನುಮೋದಿಸಲು ಮಹಾಸಭೆಗೆ ಮಂಡಿಸಲಾಗಿದೆ.

ವಿಷಯ–7 : 2023–24ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ ಮತ್ತು ಸಂಭಾವನೆ ನಿರ್ಧರಣೆ.

ಟಿಪ್ಪಣಿ : 2023–24ನೇ ಸಾಲಿನ ಮಹಾಮಂಡಳದ ಲೆಕ್ಕಪರಿಶೋಧನೆಯನ್ನು ಮೆ:ಎಂ.ಎಸ್.ಎಸ್.ವಿ & ಕಂಪನಿ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಮಾಡಿಸಲು ಸರ್ವ ಸದಸ್ಯರ ಮಹಾಸಭೆಯ ಒಪ್ಪಿಗೆಗಾಗಿ ಮಂಡಿಸಲಾಗಿದೆ.

ವಿಷಯ–8 : 2023–24ನೇ ಸಾಲಿನ ಅಂದಾಜು ಆಯವ್ಯಯಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಮತ್ತು ಕಳೆದ ಸಾಲಿನ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.

ಟಿಪ್ಪಣಿ : 2023–24ನೇ ಸಾಲಿನ ಅಂದಾಜು ಆಯವ್ಯಯಗಳನ್ನು ಪರಿಶೀಲಿಸಿ ಅನುಮೋದನೆ ಮತ್ತು ಕಳೆದ ಸಾಲಿನ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.

ವಿಷಯ–9 : ಮುನ್ಸೂಚನೆಯ ಮೇರೆಗೆ ಸಭಾಪತಿಯವರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ಟಿಪ್ಪಣಿ : ಮಹಾಮಂಡಳವು ಅಥವಾ ಸದಸ್ಯ ಬ್ಯಾಂಕುಗಳು ಕೋರುವ ಇತರೇ ವಿಷಯಗಳನ್ನು ಚರ್ಚಿಸಿ ನಿರ್ಣಯಿಸುವುದು.

ಮಹಾಮಂಡಳದ ಆಡಳಿತ ಮಂಡಳಿಯ ಪರವಾಗಿ

ಸಹಿ/–

**(ಪುಂಡಲೀಕ್ ಎನ್. ಕೆರೂರೆ)**

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಗೆ,

ಅಧ್ಯಕ್ಷರು/ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ,

ರಾಜ್ಯದ ಎಲ್ಲಾ ಸದಸ್ಯ ಪಟ್ಟಣ ಸಹಕಾರ ಬ್ಯಾಂಕುಗಳು



# ಅಧ್ಯಕ್ಷರ ಅನಿಸಿಕೆ

ಎಚ್.ಕೆ. ಪಾಟೀಲ
ಅಧ್ಯಕ್ಷರು

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಸಹಕಾರ ಪಟ್ಟಣ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬ್ಯಾಂಕಿಂಗ್ ಸೇವೆಗೆ ಅಗತ್ಯವಿರುವ ಎಲ್ಲಾ ವಿಷಯಗಳ ಬಗ್ಗೆ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ನಿರಂತರವಾಗಿ ಮಾರ್ಗದರ್ಶನ ನೀಡಲಾಗುತ್ತಿದೆ. ರಾಷ್ಟ್ರದಲ್ಲಿ ಅದರಲ್ಲಿ ಬ್ಯಾಂಕಿಂಗ್ ವಲಯದಲ್ಲಿ ಆಗುತ್ತಿರುವ ಬೆಳವಣಿಗೆಗಳ ಬಗ್ಗೆ ತಿಳಿಯಲು ಪ್ರತಿ ವಾರಕ್ಕೆ 8 ಪುಟಗಳ ವಾರಪತ್ರಿಕೆ ಮತ್ತು 48 ಪುಟಗಳ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆಗಳ ಮೂಲಕ ಹಲವಾರು ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿ ತಮಗೆ ಮಹಾಮಂಡಳ ತಲುಪಿಸುತ್ತಿದೆ. ಅದೇ ರೀತಿ ಭಾರತೀಯ ರಿಜರ್ವ್ ಬ್ಯಾಂಕ್‌ನೊಂದಿಗೆ ನಿಕಟ ಸಂಪರ್ಕ ಹೊಂದಿ ಅನೇಕ ವಿಚಾರಗಳನ್ನು ಅವರುಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವಲ್ಲಿ ಮಹಾಮಂಡಳ ನಿರಂತರವಾಗಿ ಪ್ರಯತ್ನಿಸುತ್ತಿದೆ.

ಮಾನ್ಯ ಸಹಕಾರಿ ಬಂಧುಗಳೇ,

ರಾಜ್ಯದ ಎಲ್ಲ ಸದಸ್ಯ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಮಹಾಮಂಡಳದ ವಾರ್ಷಿಕ ಮಹಾಸಭೆಗೆ ಆಗಮಿಸಿರುವ ಎಲ್ಲ ನನ್ನ ಸಹಕಾರಿ ಬಂಧುಗಳಿಗೆ ಸ್ವಾಗತ ಬಯಸುವೆ.

ನಮ್ಮ ದೇಶದಲ್ಲಿ ಒಟ್ಟು 1514 ಪಟ್ಟಣ ಸಹಕಾರಿ ಬ್ಯಾಂಕುಗಳಿದ್ದು, ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾತ ರಾಜ್ಯಗಳಲ್ಲಿ ಅತೀ ಹೆಚ್ಚು ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ 253 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, ರೂ.47,258.28/–ಕೋಟಿ ಠೇವಣಿ ಹೊಂದಿ ರೂ.29,799.71/–ಕೋಟಿ ವಿವಿಧ ಉದ್ದೇಶಗಳಿಗೆ ಸಾಲವನ್ನು ನೀಡಿರುತ್ತವೆ. ಒಟ್ಟು ರೂ.56,087.36/– ಕೋಟಿ ದುಡಿಯುವ ಬಂಡವಾಳವನ್ನು ಹೊಂದಿ ರೂ.426.71./– ಕೋಟಿ ನಿವ್ವಳ ಲಾಭವನ್ನು ಗಳಿಸಿವೆ. ಇಡೀ ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಅತ್ಯುತ್ತಮ ಸೇವಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ಭಾರತೀಯ ರಿಜರ್ವ್ ಬ್ಯಾಂಕ್ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಮಧ್ಯೆ ಭಾರತೀಯ ರಿಜರ್ವ್ ಬ್ಯಾಂಕ್ ಹಲವಾರು ನಿರ್ದೇಶನಗಳನ್ನು ಹೊರಡಿಸಿ ಸಂಪೂರ್ಣ ಹತೋಟಿ ಸಾಧಿಸುತ್ತಿವೆ.

ಈಗಾಗಲೇ ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕುಗಳು NEFT / RTGS / ECS / Internet Banking / Mobile Banking / ATM Service / Credit / Debit Cards ಮುಂತಾದ Payment App ಗಳ ಮೂಲಕ ಉತ್ತಮ ಸೇವೆಗಳನ್ನು ನೀಡುತ್ತಿವೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಸಹ ಹೊಸ ಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಂಡು ಗ್ರಾಹಕರ ಮನೆ ಬಾಗಿಲಿಗೆ ಹೋಗಿ ಸೇವೆ ನೀಡುವುದು ಅನಿವಾರ್ಯವಾಗಿರುತ್ತದೆ. ನಾವುಗಳು ಪ್ರಗತಿ ಸಾಧಿಸುವಲ್ಲಿ ವಿಫಲರಾದರೆ ಭಾರತೀಯ ರಿಜರ್ವ್ ಬ್ಯಾಂಕ್ ಕಠಿಣ ಕ್ರಮಗಳನ್ನು ನಮ್ಮ ಮೇಲೆ ಜರುಗಿಸಿ ಸಹಕಾರ ಸಂಘವಾಗಿ ಅಥವಾ ಬೇರೊಂದು ಬ್ಯಾಂಕಿನೊಡನೆ ವಿಲೀನವಾಗುವಂತೆ ನಿರ್ದೇಶನ

ನೀಡುತ್ತಿರುವುದು ತಾವೆಲ್ಲರೂ ಗಮನಿಸಿರುತ್ತೀರಿ. ಆದ್ದರಿಂದ ನಮ್ಮ ಬ್ಯಾಂಕಿನ ವಹಿವಾಟುಗಳನ್ನು ಹೆಚ್ಚಿಸಿಕೊಂಡು ವಸೂಲಾತಿಗೆ ಹೆಚ್ಚು ಒತ್ತುಕೊಟ್ಟು ಆರ್ಥಿಕವಾಗಿ ಸದೃಢವಾಗಬೇಕಾಗಿದೆ.

ಇತ್ತೀಚೆಗೆ ಕೇಂದ್ರ ಸರ್ಕಾರವು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ಅನೇಕ ತಿದ್ದುಪಡಿ ತಂದಿರುವುದರಿಂದ ಸದರಿ ಕಾಯ್ದೆ ರೀತ್ಯ ನಮ್ಮ ಸಹಕಾರ ಪಟ್ಟಣ ಬ್ಯಾಂಕುಗಳು ಅವುಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆಡಳಿತ ಮಂಡಳಿ ಸದಸ್ಯರ ವೃತ್ತಿಪರತೆ ಮತ್ತು ಅಧಿಕಾರಿ ಸಿಬ್ಬಂದಿಗಳ ಕಾರ್ಯದಕ್ಷತೆ ಪ್ರಮುಖವಾಗಿರುತ್ತದೆ.

ಈ ದಿಸೆಯಲ್ಲಿ ಈಗಾಗಲೇ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಹಲವಾರು ಸಭೆಗಳನ್ನು ಏರ್ಪಡಿಸಿ, ಎನ್‌ಸಿಎಫ್‌ಡಿಸಿ ಸಂಸ್ಥೆಯನ್ನು ಪ್ರಾರಂಭಿಸಿದೆ. ಈಗಾಗಲೇ ಈ ಎನ್‌ಸಿಎಫ್‌ಡಿಸಿ ಸಂಸ್ಥೆ ಸದಸ್ಯರಿಂದ ಷೇರುಗಳನ್ನು ಸಂಗ್ರಹಿಸುತ್ತಿದೆ. ಈ ಅಂಬ್ರೆಲಾ ಅರ್ಗನೈಜೇಷನ್ ಸಂಸ್ಥೆಗೆ ಭಾರತೀಯ ರಿಜರ್ವ್ ಬ್ಯಾಂಕಿನಿಂದ ಪರವಾನಿಗೆಯನ್ನು ಪಡೆಯಲಾಗಿದೆ. ಈ ಸಂಸ್ಥೆ ಬಲವಾಗಿ ಬೆಳೆಯಬೇಕಾದರೆ ತಮ್ಮೆಲ್ಲರ ಸಹಕಾರ ಅತ್ಯಗತ್ಯವಾಗಿರುತ್ತದೆ. ಬಹುಶಃ ಮುಂದಿನ ವರ್ಷಗಳಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆಶ್ರಯ ಕಲ್ಪಿಸುವ ಬೃಹತ್ ಸಂಸ್ಥೆಯಾಗಿರುತ್ತದೆ ಎಂಬ ನಂಬಿಕೆ ನನಗಿದೆ. ಪ್ರಯುಕ್ತ, ಈ ಅಂಬ್ರೆಲಾ ಸಂಸ್ಥೆಯ ಸದಸ್ಯತ್ವವನ್ನು ನಮ್ಮ ಎಲ್ಲ ಪಟ್ಟಣ ಸಹಕಾರ ಬ್ಯಾಂಕುಗಳು ಪಡೆದುಕೊಂಡಲ್ಲಿ ಖಂಡಿತವಾಗಿಯೂ ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆಗೆ ಸಹಕಾರಿಯಾಗಲಿದೆಂದು ಈ ಮೂಲಕ ನಾನು ಹೇಳಬಯಸುತ್ತೇನೆ.

ಮಹಾಮಂಡಳವು ಭಾರತೀಯ ರಿಜರ್ವ್ ಬ್ಯಾಂಕಿನ ಸ್ಥಾಯಿ ಸಲಹಾ ಸಮಿತಿ(SAC) ಮತ್ತು ಟಾಫ್‌ಕಬ್ ಸಮಿತಿ(TAFCUB) ಸಭೆಗಳಲ್ಲಿ ನಿರಂತರವಾಗಿ ಭಾಗವಹಿಸಿ ಏಕಕಾಲಿಕ ಸಾಲ ತಿರುವಳಿ ಮತ್ತು ಹೊಸ ಶಾಖಾ ವಿಸ್ತರಣೆಯ ಕುರಿತು ಅವಿರತ ಹೋರಾಟದಿಂದ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಗೆ ಪೂರ್ಣ ಅಧಿಕಾರ ನೀಡಿರುವುದು ಉತ್ತಮ ಬೆಳವಣಿಗೆ ಆಗಿರುತ್ತದೆ. ಈಗ ನಾವು ಏಕಕಾಲಿಕ ಸಾಲ ತೀರುವಳಿ ಮತ್ತು ಹೊಸ ಶಾಖೆ ಪ್ರಾರಂಭಕ್ಕೆ ಸಹಕಾರ ಸಂಘಗಳ ನಿಬಂಧಕರ ಮತ್ತು ಭಾರತೀಯ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಅವಶ್ಯಕತೆ ಇರುವುದಿಲ್ಲ.

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಸಹಕಾರ ಪಟ್ಟಣ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬ್ಯಾಂಕಿಂಗ್ ಸೇವೆಗೆ ಅಗತ್ಯವಿರುವ ಎಲ್ಲಾ ವಿಷಯಗಳ ಬಗ್ಗೆ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ನಿರಂತರವಾಗಿ ಮಾರ್ಗದರ್ಶನ ನೀಡಲಾಗುತ್ತಿದೆ. ರಾಷ್ಟ್ರದಲ್ಲಿ ಅದರಲ್ಲಿ ಬ್ಯಾಂಕಿಂಗ್ ವಲಯದಲ್ಲಿ ಆಗುತ್ತಿರುವ ಬೆಳವಣಿಗೆಗಳ ಬಗ್ಗೆ ತಿಳಿಯಲು ಪ್ರತಿ ವಾರಕ್ಕೆ 8 ಪುಟಗಳ ವಾರಪತ್ರಿಕೆ ಮತ್ತು 48 ಪುಟಗಳ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆಗಳ ಮೂಲಕ ಹಲವಾರು ವಿಷಯಗಳನ್ನು ಸಂಗ್ರಹಿಸಿ ಮುದ್ರಿಸಿ ತಮಗೆ ಮಹಾಮಂಡಳ ತಲುಪಿಸುತ್ತಿದೆ. ಅದೇ ರೀತಿ ಭಾರತೀಯ ರಿಜರ್ವ್ ಬ್ಯಾಂಕ್‌ನೊಂದಿಗೆ ನಿಕಟ ಸಂಪರ್ಕ ಹೊಂದಿ ಅನೇಕ ವಿಚಾರಗಳನ್ನು ಅವರುಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವಲ್ಲಿ ಮಹಾಮಂಡಳ ನಿರಂತರವಾಗಿ ಪ್ರಯತ್ನಿಸುತ್ತಿದೆ.

ಸದಾ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ನಮ್ಮ ಮಹಾಮಂಡಳಕ್ಕೆ ಸಹಕಾರ ನೀಡಿ ಗೌರವಿಸುತ್ತಿರುವುದರಿಂದ ಸಹಕಾರ ಬಂಧುಗಳಿಗೆ ನನ್ನ ಕೃತಜ್ಞತೆಗಳು.

ಮಹಾಮಂಡಳದ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಮತ್ತು ಎಲ್ಲ ಆಡಳಿತ ಮಂಡಳಿ ಸದಸ್ಯರುಗಳು, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಗಳು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೆರೂರೆ, ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ್ ಭಟ್ ಹಾಗೂ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ಮೆಚ್ಚುಗೆಯನ್ನು ಸೂಚಿಸಿ ಅವರೆಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

**ಎಚ್.ಕೆ. ಪಾಟೀಲ**
ಅಧ್ಯಕ್ಷರು

# ಕೃತಜ್ಞತೆಗಳು – ಅಭಿನಂದನೆಗಳು



ಶ್ರೀ ಪರಮಶಿವಯ್ಯ ಬಿ.ಎಸ್.
ಉಪಾಧ್ಯಕ್ಷರು

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಎಲ್ಲಾ ಸಿಬ್ಬಂದಿ ವರ್ಗದವರಿಗೆ ದೂರಶಿಕ್ಷಣದ ಮೂಲಕ ಮೂರು ತಿಂಗಳ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (DUCBM) ನ್ನು ಪ್ರಾರಂಭಿಸಿ ಈಗಾಗಲೇ 09 ಬ್ಯಾಚ್‌ಗಳನ್ನು ಯಶ್ವಸಿಯಾಗಿ ಪೂರೈಸಿದೆ. ಅದೇ ರೀತಿ ಅಧಿಕಾರಿಗಳಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ (Management Development Programme)ಯನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿ ತಿಂಗಳು ಏರ್ಪಡಿಸಲಾಗುತ್ತಿದೆ. ಈ ತರಬೇತಿಯಲ್ಲಿ ಇತ್ತೀಚಿನ ಎಲ್ಲ ಬ್ಯಾಂಕಿಂಗ್ ವಿಷಯಗಳನ್ನು ಸಂಗ್ರಹಿಸಿ ನುರಿತ ಉಪನ್ಯಾಸಕರಿಂದ ಉಪನ್ಯಾಸವನ್ನು ನೀಡಲಾಗುತ್ತಿದೆ.

**ಆತ್ಮೀಯ ಸಹಕಾರಿಗಳೇ,**

ನಮ್ಮ ಮಹಾಮಂಡಳದ 58ನೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿರುವ ಎಲ್ಲ ಸಹಕಾರಿ ಬಂಧುಗಳಿಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ಸಹಕಾರ ಬ್ಯಾಂಕುಗಳ ಮಾತೃ ಸಂಸ್ಥೆಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇತ್ತೀಚೆಗೆ ಭಾರತೀಯ ರಿಜರ್ವ್ ಬ್ಯಾಂಕಿನ ನೀತಿ ನಿಯಮಗಳನ್ನು ನೋಡಿದರೆ ದೇಶದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಕಡಿಮೆ ಮಾಡುವುದೇ ಉದ್ದೇಶವಾಗಿದೆ. ಆದ್ದರಿಂದ ಭಾರತೀಯ ರಿಜರ್ವ್ ಬ್ಯಾಂಕಿನವರು ದಿನಕ್ಕೊಂದು ಮಾನದಂಡಗಳನ್ನು ವಿಧಿಸಿ, ಸುತ್ತೋಲೆಗಳನ್ನು ಹೊರಡಿಸುತ್ತಿರುವುದು ನಮಗೆಲ್ಲ ತಿಳಿದ ವಿಷಯವಾಗಿದೆ.

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಎಲ್ಲಾ ಸಿಬ್ಬಂದಿ ವರ್ಗದವರಿಗೆ ದೂರಶಿಕ್ಷಣದ ಮೂಲಕ ಮೂರು ತಿಂಗಳ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (DUCBM) ನ್ನು ಪ್ರಾರಂಭಿಸಿ ಈಗಾಗಲೇ 09 ಬ್ಯಾಚ್‌ಗಳನ್ನು ಯಶ್ವಸಿಯಾಗಿ ಪೂರೈಸಿದೆ. ಅದೇ ರೀತಿ ಅಧಿಕಾರಿಗಳಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ (Management Development Programme)ಯನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿ ತಿಂಗಳು ಏರ್ಪಡಿಸಲಾಗುತ್ತಿದೆ. ಈ ತರಬೇತಿಯಲ್ಲಿ ಇತ್ತೀಚಿನ ಎಲ್ಲ ಬ್ಯಾಂಕಿಂಗ್ ವಿಷಯಗಳನ್ನು ಸಂಗ್ರಹಿಸಿ ನುರಿತ ಉಪನ್ಯಾಸಕರಿಂದ ಉಪನ್ಯಾಸವನ್ನು ನೀಡಲಾಗುತ್ತಿದೆ.

ಇನ್ನು ಮುಂದೆ ನಾವುಗಳು ಆದಷ್ಟು ಹೊಸ ತಂತ್ರಾಂಶಗಳನ್ನು ಬ್ಯಾಂಕುಗಳಲ್ಲಿ ಅಳವಡಿಸಿಕೊಂಡು ಗ್ರಾಹಕರಿಗೆ ಉತ್ತಮ ಸೇವೆ ನೀಡಿ ಅವರುಗಳ ವಿಶ್ವಾಸಗಳಿಸಿ ಉತ್ತಮ ಬ್ಯಾಂಕಿಂಗ್ ಸೇವೆ ನೀಡಿ ಬ್ಯಾಂಕಿಂಗ್ ವ್ಯವಹಾರ ಮಾಡುವುದು ಸೂಕ್ತವಾಗಿರುತ್ತದೆ. ಅದರಂತೆ ಮಹಾಮಂಡಳವು ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರುಗಳಿಗೆ / ಅಧಿಕಾರಿ ವರ್ಗದವರಿಗೆ ಹೆಚ್ಚಿನ ಪ್ರಮಾಣದಲ್ಲಿ ವಿಚಾರ ಸಂಕಿರಣ / ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ತಾವೆಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅದರ ಸದುಪಯೋಗ ಪಡೆದುಕೊಳ್ಳಬೇಕು. ಅದರಂತೆ ಮಹಾಮಂಡಳದ ವಾರಪತ್ರಿಕೆ, ಬ್ಯಾಂಕಿಂಗ್ ಪ್ರಪಂಚ ಪತ್ರಿಕೆಗಳಲ್ಲಿ ಉತ್ತಮ ಲೇಖನ ಹಾಗೂ ಬ್ಯಾಂಕಿಂಗ್ ವಿಷಯಗಳನ್ನು ಸಂಗ್ರಹಿಸಿ ಪ್ರಕಟಿಸಲಾಗುತ್ತಿದೆ.

ಮಹಾಮಂಡಳವು ತನ್ನ ಸದಸ್ಯ ಬ್ಯಾಂಕುಗಳಿಗೆ 24x7 ಕೇವಲ 24 ಗಂಟೆಯಲ್ಲಿ ತಮ್ಮ ಪ್ರಶ್ನೆಗೆ ಉತ್ತರ ನೀಡಲು ವ್ಯವಸ್ಥೆಯನ್ನು ಮಾಡಿಕೊಂಡು ಉತ್ತಮ ಸೇವೆಯನ್ನು ನೀಡಲಾಗುತ್ತಿದೆ. ಅದೇ ರೀತಿ ಇ–ಸ್ಟಾಂಪಿಂಗ್ ಸೇವೆ / ದಾವಾ ಪ್ರಕರಣಗಳ ಇತ್ಯರ್ಥ ಮತ್ತು ಅಮಲ್ಜಾರಿ ಪ್ರಕರಣಗಳ ಇತ್ಯರ್ಥಗಳ ಸೇವೆ ಹೀಗೆ ಹಲವಾರು ಸೇವೆಗಳನ್ನು ನಮ್ಮ ಮಹಾಮಂಡಳದ ವತಿಯಿಂದ ನಿರ್ವಹಿಸುತ್ತಿದೆ.

ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ.ಪಾಟೀಲರ ನೇತೃತ್ವದಲ್ಲಿ ನಮ್ಮ ಆಡಳಿತ ಮಂಡಳಿ ಸದಸ್ಯರು / ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳು ಹಾಗೂ ಮಹಾಮಂಡಳದ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ.

# ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,

ನಂ.132, ಕೆ.ಹೆಚ್. ರಸ್ತೆ, ಬೆಂಗಳೂರು – 560 027.

**ಮಹಾಮಂಡಳದ 57ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ**
**ದಿನಾಂಕ:20.09.2022 ರಂದು ಮಧ್ಯಾಹ್ನ 12–15 ಗಂಟೆಗೆ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್.ಕೆ.ಪಾಟೀಲರ ಘನ ಅಧ್ಯಕ್ಷತೆಯಲ್ಲಿ ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಜರುಗಿದ ಸಭೆಯ ನಡವಳಿಕೆಗಳು.**

ಈ ಮಹಾಸಭೆಗೆ ರಾಜ್ಯದ ವಿವಿಧ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳಿಂದ 167 ಪ್ರತಿನಿಧಿಗಳು ಭಾಗವಹಿಸಿದ್ದರು.

ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್ ಕೇರೂರೆ ರವರು ಸಭೆ ಪ್ರಾರಂಭಿಸಲು ಕೋರಂ ಆಗಿದೆಯೆಂದು ತಿಳಿಸಿದರು.

ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡರವರು ರಾಜ್ಯದ ವಿವಿಧ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಆಗಮಿಸಿದ ಪ್ರತಿನಿಧಿಗಳನ್ನು ಹಾಗೂ ವೇದಿಕೆಯ ಮೇಲೆ ಇದ್ದ ಗಣ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು.

ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಮಹಾಮಂಡಳದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯ ಕಲಾಪಗಳನ್ನು ನಡೆಸಿಕೊಟ್ಟರು. ಈ ಸಭೆಯಲ್ಲಿ 2021–22ನೇ ಸಾಲಿನಲ್ಲಿ ನಿಧನರಾದ ಸಹಕಾರಿ ಹಾಗೂ ಸಚಿವರಾದ ಶ್ರೀ ಉಮೇಶ್ ಕತ್ತಿ ಮತ್ತು ರಾಜ್ಯದ ಇತರೇ ಪ್ರದೇಶಗಳಲ್ಲಿ ನಿಧನರಾದ ಸಹಕಾರಿ ಧುರೀಣರೆಲ್ಲರೂ ಸಹಕಾರಿ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ, ಪ್ರಶಂಶಿಸಿ ಶ್ರದ್ಧಾಂಜಲಿಯನ್ನು ಅರ್ಪಿಸಿ ಸಭೆಯು 2 ನಿಮಿಷ ಮೌನ ಆಚರಿಸುವ ಮೂಲಕ ದಿವಂಗತರುಗಳ ಆತ್ಮಕ್ಕೆ ಶಾಂತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತು.

ನಂತರ ಸಭೆಯ ಉದ್ಘಾಟನೆಯನ್ನು ಮಹಾಮಂಡಳದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್.ಕೆ.ಪಾಟೀಲರವರು ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿ, ಮಾತನಾಡಿ ಬಹಳ ದಿನಗಳ ನಂತರ ಭೇಟಿಯಾಗುತ್ತಿದ್ದೇವೆ ಇದೊಂದು ಖುಷಿಯ ಸಂಗತಿ. ನಿಮಗೆ ಮತ್ತು ನಮಗೆಲ್ಲರಿಗೆ ಗೊತ್ತಿದ್ದ ಹಾಗೆ ಸಹಕಾರ ಕ್ಷೇತ್ರ ದೊಡ್ಡದಾಗುತ್ತಿದೆ. ಆದರೆ ಶಕ್ತಿ ಹೆಚ್ಚಾಗುತ್ತಿಲ್ಲ. ಕೇಂದ್ರ ಸರ್ಕಾರ, ಭಾರತೀಯ ರಿಜರ್ವ್ ಬ್ಯಾಂಕ್, ರಾಜ್ಯ ಸರ್ಕಾರಗಳ ಹಸ್ತಕ್ಷೇಪ ಆಗುತ್ತಿದೆ. ಪ್ರತಿಯೊಂದು ಹಂತದಲ್ಲಿಯೂ ತೊಂದರೆಗಳನ್ನು ಅನುಭವಿಸುತ್ತಿವೆ. ನೆಟ್ ಎನ್‌ಪಿಎ ಕಡಿಮೆಯಾಗುತ್ತಿದೆ. ಗ್ರಾಸ್ ಎನ್‌ಪಿಎ ಸಾಕಷ್ಟು ಹೆಚ್ಚಾಗುತ್ತ ಹೋಗುತ್ತಿದೆ. ವರ್ಷ ವರ್ಷ ಎನ್‌ಪಿಎ ಹೆಚ್ಚಾಗುತ್ತಿದೆ. ನಮ್ಮನ್ನು ರಕ್ಷಣೆ ಮಾಡುವವರು ಯಾರು ಇಲ್ಲ. ಎಲ್ಲರೂ ಟೀಕೆ ಮಾಡುವವರೇ. ದೇಶದ ಸಾರ್ವಜನಿಕ ವಲಯದ ಬ್ಯಾಂಕುಗಳ ಸಾಲವನ್ನು ಮನ್ನಾ ಮಾಡಿದ್ದಾರೆ. 9 ಲಕ್ಷ 91 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಬಿಗ್ ಟೇಕಪ್ ಮಾಡಿದ್ದಾರೆ. ರೈಟ್‌ಅಪ್ ಮಾಡಿದ್ದಾರೆ. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಎನ್‌ಪಿಎ ಜಾಸ್ತಿ ಆದರೆ ಲಿಕ್ವಿಡಿಟಿ, ಮರ್ಜರ್ ಮಾಡಬೇಕು ಎಂದು ಹೇಳುತ್ತಾರೆ. ಆದ್ದರಿಂದ ನಮ್ಮ ಬ್ಯಾಂಕುಗಳನ್ನು ಉಳಿಸಿಕೊಳ್ಳಬೇಕಾದರೆ ನಾವು ವಿಲೀನಗೊಳ್ಳಬಾರದು, ಲಿಕ್ವಿಡೇಟ್ ಆಗಬಾರದು. ದಿನಾಂಕ : 31.03.2022ರ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ 256 ಪಟ್ಟಣ ಸಹಕಾರ ಬ್ಯಾಂಕುಗಳು 1051 ಶಾಖೆಗಳನ್ನು ಹೊಂದಿ, ರೂ.410.24 ಕೋಟಿ ಲಾಭಗಳಿಸಿವೆ.

ಅಂಬ್ರೆಲಾ ಅರ್ಗನೈಜೇಷನ್ ಸುಮಾರು 15 ವರ್ಷಗಳ ಪ್ರಯತ್ನದ ಫಲವಾಗಿ ಅಂಬ್ರೆಲಾ ಅರ್ಗನೈಜೇಷನ್‌ಗೆ ಭಾರತೀಯ ರಿಜರ್ವ್ ಬ್ಯಾಂಕಿನವರು ಬೆಂಬಲವನ್ನು ಕೊಡುತ್ತಿದ್ದಾರೆ. ಇಂದು "ನ್ಯಾಷನಲ್ ಕೋ–ಆಪರೇಟಿವ್ ಫೈನಾನ್ಸ್ ಅಂಡ್ ಡೆವಲಪಮೆಂಟ್ ಕಾರ್ಪೋರೇಷನ್ ಲಿ.," ಎಂಬ ಕೇಂದ್ರದ ಅಪೆಕ್ಸ್ ಕಂಪನಿಯಾಗಿ ಭಾರತೀಯ ರಿಜರ್ವ್ ಬ್ಯಾಂಕಿನಿಂದ ಪರವಾನಿಗೆ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿದೆ. ಭಾರತೀಯ ರಿಜರ್ವ್ ಬ್ಯಾಂಕಿನವರು ಎನ್‌ಸಿಎಫ್‌ಡಿಸಿ ಯಲ್ಲಿ ಹೂಡಿಕೆ ಮಾಡಬಹುದು ಎಂದು ಹೇಳುತ್ತಿದ್ದಾರೆ. ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕುಗಳಿಗೆ ಅಪೆಕ್ಸ್ ಬ್ಯಾಂಕ್ ಹೇಗೆ ಕಾರ್ಯನಿರ್ವಹಿಸುತ್ತಿದೆಯೋ, ಹಾಗೆಯೇ ದೇಶದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಎನ್‌ಸಿಎಫ್‌ಡಿಸಿ (ಅಂಬ್ರೆಲಾ ಅರ್ಗನೈಜೇಷನ್) ಸಂಸ್ಥೆಯು ಕಾರ್ಯನಿರ್ವಹಿಸುತ್ತದೆ. ಆದ್ದರಿಂದ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಅಂಬ್ರೆಲಾ ಅರ್ಗನೈಜೇಷನ್ ಸಂಸ್ಥೆಯ ಸದಸ್ಯತ್ವ ಪಡೆದುಕೊಂಡಲ್ಲಿ ಬ್ಯಾಂಕುಗಳ ಬೆಳವಣಿಗೆಗೆ ಸಹಕಾರಿಯಾಗಲಿದೆ. ನಮಗೆ ಅಂಬ್ರೆಲಾ ಅರ್ಗನೈಜೇಷನ್ ರಕ್ಷಣಾತ್ಮಕವಾದ ಸಂಸ್ಥೆಯಾಗಿದೆ. ಈಗಾಗಲೇ ನಮ್ಮ

ದೇಶದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಅಂಬ್ರೆಲಾ ಅರ್ಗನೈಜೇಷನ್ ಸಂಸ್ಥೆಗೆ ಒಟ್ಟು ಸುಮಾರು ರೂ.40ಕೋಟಿ ಷೇರು ಹಣ ಕ್ರೋಢೀಕರಣವಾಗಿದೆ. ಗುಜರಾತ್ ರೂ.23.63 ಕೋಟಿ, ಆಂಧ್ರಪ್ರದೇಶ ರೂ.3.23 ಕೋಟಿ, ಕರ್ನಾಟಕ ರೂ.2.44 ಕೋಟಿ, ಮಹಾರಾಷ್ಟ್ರ ರೂ.1.26 ಕೋಟಿ, ತೆಲಂಗಾಣ ರೂ.0.57 ಕೋಟಿ, ಮಧ್ಯಪ್ರದೇಶ ರೂ.0.31 ಕೋಟಿ, ರಾಜಸ್ತಾನ ರೂ.0.25 ಕೋಟಿ, ದೆಹಲಿ ರೂ.0.10 ಕೋಟಿಗಳು.

ಈಗಾಗಲೇ ನಮ್ಮ ರಾಜ್ಯದ 8 ಪಟ್ಟಣ ಸಹಕಾರ ಬ್ಯಾಂಕುಗಳು ಷೇರು ಹಣ ಸಂದಾಯ ಮಾಡಿವೆ. ಆದ್ದರಿಂದ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಒಟ್ಟು ಆಸ್ತಿಗೆ ಶೇ.0.10%ರಷ್ಟು ಹಣವನ್ನು ಕೊಡಬಹುದು. ತಾವು ಈ ಷೇರು ಹಣವನ್ನು ಕೊಡುವುದರಿಂದ ಕರ್ನಾಟಕದವರು ಮುಂಚೂಣಿಯಲ್ಲಿದ್ದಾರೆ ಎನ್ನಬಹುದು. ಆದ್ದರಿಂದ ಸದ್ಯದ ಸಂದರ್ಭದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಬೆಂಬಲ ದೊರೆಯಬೇಕಾದರೆ ಅಂಬ್ರೆಲಾ ಅರ್ಗನೈಜೇಷನ್ ಕಾರ್ಯನಿರ್ವಹಿಸಬೇಕು. ಆದ್ದರಿಂದ ರಿಜರ್ವ್ ಬ್ಯಾಂಕಿನವರು ಎಷ್ಟು ಪ್ರಮಾಣದ ಷೇರು ನೀಡಲು ಒಪ್ಪಿಗೆ ಸೂಚಿಸಿದ್ದಾರೆಯೋ ಅಷ್ಟು ಪ್ರಮಾಣದ ಷೇರು ಹೂಡಿಕೆ ಮಾಡಬೇಕಾಗುತ್ತದೆಂದು ತಿಳಿಸಿದರು.

ಪಟ್ಟಣ ಸಹಕಾರ ಬ್ಯಾಂಕುಗಳ ಬಹಳಷ್ಟು ಸಮಸ್ಯೆಗಳಿವೆ. ಮುಂಬರುವ ದಿನಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇವೆ. ಈಗಾಗಲೇ ನಮ್ಮ ದಾವಾ ಪಂಚಾಯಿತಿ ನ್ಯಾಯಾಲಯಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ದಾವೆಗಳನ್ನು ಶೀಘ್ರವಾಗಿ ವಿಲೇವಾರಿಗೊಳಿಸಿ, ಬ್ಯಾಂಕುಗಳ ಹಿತಕ್ಕೆ ಸ್ಪಂದಿಸಿ ಎಂದು ಈಗಾಗಲೇ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇವೆ ಎಂದರು.

ನಂತರ ಸಭೆಯ ವಿಷಯಗಳನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್ ಕೇರೂರೆ ರವರು ಓದಿದರು.

## ಸಭೆಯ ವಿಷಯ ಹಾಗೂ ನಿರ್ಣಯಗಳು

ವಿಷಯ–1 : ಸಭೆಯ ನೋಟೀಸನ್ನು ಓದಿ ದಾಖಲಿಸುವುದು.

ನಿರ್ಣಯ : ದಿನಾಂಕ:20.09.2022ರಂದು ಜರುಗಿದ ಮಹಾಮಂಡಳದ 2021–22ನೇ ಸಾಲಿನ 57ನೇ ವಾರ್ಷಿಕ ಮಹಾಸಭೆಯ ಮೀಟಿಂಗ್ ನೋಟೀಸನ್ನು ಓದಲಾಯಿತು ಸದರಿ ನಡವಳಿಗಳನ್ನು ದಾಖಲು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ–2 : ದಿನಾಂಕ:30.11.2021ರ ಸಾಲಿನ ಸಾಮಾನ್ಯ ಸಭೆಯ ನಡವಳಿಗಳನ್ನು ಪರಿಶೀಲಿಸಿ ದೃಢೀಕರಿಸುವುದು.

ನಿರ್ಣಯ : ದಿನಾಂಕ:30.11.2021ರಂದು ಜರುಗಿದ ಮಹಾಮಂಡಳದ 56ನೇ ವಾರ್ಷಿಕ ಮಹಾಸಭೆಯ ನಡವಳಿಗಳನ್ನು ಪರಿಶೀಲಿಸಿ ದಾಖಲು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ–3 : ಮಂಡಲಿಯು ಮಂಡಿಸಿದ ಹಿಂದಿನ ವರ್ಷದ ವಾರ್ಷಿಕ ವರದಿಯ ಪರಿಗಣನೆ.

ನಿರ್ಣಯ : 2021–22ನೇ ಸಾಲಿನಲ್ಲಿ ಮಹಾಮಂಡಳವು ಸದಸ್ಯ ಬ್ಯಾಂಕುಗಳಿಗೆ ಒದಗಿಸಿರುವ ಸೇವೆ ಮತ್ತು ಕಾರ್ಯ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಪರಿಶೀಲಿಸಿ ಅಂಗೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ–4 : 2021–22ನೇ ಸಾಲಿನಲ್ಲಿ ಜರುಗಿದ ತರಬೇತಿ/ವಿಚಾರ ಸಂಕಿರಣ ಕಾರ್ಯಕ್ರಮಗಳ ಪಟ್ಟಿಯನ್ನು ಪರಿಶೀಲಿಸಿ ಅನುಮೋದಿಸುವುದು.

ನಿರ್ಣಯ : 2021–22ನೇ ಸಾಲಿನಲ್ಲಿ ಮಹಾಮಂಡಳವು ತನ್ನ ಸದಸ್ಯ ಬ್ಯಾಂಕುಗಳ ಆಡಳಿತ ಮಂಡಲಿಯ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ಏರ್ಪಡಿಸಿದ್ದ ತರಬೇತಿ / ವಿಚಾರ ಸಂಕಿರಣ ವಿವರಗಳ ಪಟ್ಟಿಯನ್ನು ಅವಲೋಕಿಸಲಾಗಿ ದಾಖಲು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ–5 : 2022–23ನೇ ಸಾಲಿಗೆ ತನ್ನ ಸದಸ್ಯ ಬ್ಯಾಂಕುಗಳಿಗೆ ಆಯೋಜಿಸಿರುವ ತರಬೇತಿ/ವಿಚಾರ ಸಂಕಿರಣ ಕಾರ್ಯಕ್ರಮಗಳ ಪಟ್ಟಿಯ ಅನುಮೋದನೆ.

ನಿರ್ಣಯ : 2022–23ನೇ ಸಾಲಿಗೆ ತನ್ನ ಸದಸ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಆಯೋಜಿಸಿರುವ ತರಬೇತಿ/ವಿಚಾರ ಸಂಕಿರಣಗಳ ಕಾರ್ಯಕ್ರಮಗಳ ಪಟ್ಟಿಯನ್ನು ಸಭೆಯಲ್ಲಿ ಪರಿಶೀಲಿಸಿ ಮಂಜೂರು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ–6 : 2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿ ಅನುಮೋದಿಸುವುದು.

ನಿರ್ಣಯ : 2021–22ನೇ ಸಾಲಿನ ಮಹಾಮಂಡಳದ ಲೆಕ್ಕಪತ್ರಗಳನ್ನು ಮೆ: ಮುರುಗೇಂದ್ರಪ್ಪ & ಕಂಪನಿ ಚಾರ್ಟರ್ಡ್ ಅಕೌಂಟೆಂಟ್ ಇವರಿಂದ ಲೆಕ್ಕ ಪರಿಶೋಧನೆಯನ್ನು ಮಾಡಿಸಲಾಗಿದೆ. ಸದರಿ ಲೆಕ್ಕಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಲಾಗಿ ಅನುಮೋದನೆ ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ–7 : 2022–23ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ ಮತ್ತು ಸಂಭಾವನೆ ನಿರ್ಧರಣೆ.

ನಿರ್ಣಯ : 2022–23ನೇ ಸಾಲಿನ ಮಹಾಮಂಡಳದ ಲೆಕ್ಕಪರಿಶೋಧನೆಯನ್ನು ಮೆ:ಎಂ.ಎಸ್.ಎಸ್.ವಿ & ಕಂಪನಿ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಮಾಡಿಸಲು ಸರ್ವ ಸದಸ್ಯರ ಮಹಾಸಭೆಗೆ ಒಪ್ಪಿಸಲಾಗಿ ಸದರಿ ಲೆಕ್ಕಪರಿಶೋಧಕರಿಂದ ಮಹಾಮಂಡಳದ ಲೆಕ್ಕಪರಿಶೋಧನೆ ಮಾಡಿಸಬಹುದೆಂದು ಮತ್ತು ಸಂಭಾವನೆ ನಿಗದಿಪಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ–8 : 2022–23ನೇ ಸಾಲಿನ ಅಂದಾಜು ಆಯವ್ಯಯಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಮತ್ತು ಕಳೆದ ಸಾಲಿನ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.

ನಿರ್ಣಯ : 2022–23ನೇ ಸಾಲಿನ ಅಂದಾಜು ಆಯವ್ಯಯಗಳನ್ನು ಪರಿಶೀಲಿಸಲಾಗಿ ಅಂಗೀಕರಿಸಬಹುದೆಂದು ಮತ್ತು ಕಳೆದ (2021–22) ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಾದ ಖರ್ಚುಗಳನ್ನು ಪರಿಶೀಲಿಸಿ ಅನುಮೋದಿಸಬಹುದೆಂದು ಸರ್ವಾನುಮತದಿಂದ ಒಪ್ಪಲಾಯಿತು.

ವಿಷಯ–9 : ಮುನ್ಸೂಚನೆಯ ಮೇರೆಗೆ ಸಭಾಪತಿಯವರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ನಿರ್ಣಯ : ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಅನೇಕ ವಿಷಯಗಳನ್ನು ಈ ಕೆಳಗಿನಂತೆ ವಿಚಾರ ವಿನಿಮಯ ಮಾಡಿಕೊಂಡರು.

ಸಭೆಯಲ್ಲಿ ಭಾಗವಹಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳಾದ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಶಿವಮೊಗ್ಗ ಇದರ ಅಧ್ಯಕ್ಷರಾದ ಶ್ರೀ ಉಮಾಶಂಕರ್ ಉಪಾಧ್ಯ ರವರು ಮಾತನಾಡಿ ಸಹಕಾರ ಮಹಾಮಂಡಳಕ್ಕೆ ಶೇ.2% ಶಿಕ್ಷಣ ನಿಧಿ ವಂತಿಗೆ ಕೊಡುತ್ತಿದ್ದೇವೆ. ಈ ಸಹಕಾರ ಮಹಾಮಂಡಳವು ನಮಗೆ ಯಾವುದೇ ರೀತಿಯ ಸೇವೆಯನ್ನು ನೀಡುವುದಿಲ್ಲ. ಅವರಿಂದ ನಮಗೆ ಏನು ಉಪಯೋಗವಿಲ್ಲ. ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ನಮಗೆ ತರಬೇತಿ, ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ನಮಗೆ ಸ್ಪಂದಿಸುತ್ತೀರಿ ಆದ್ದರಿಂದ ಪಟ್ಟಣ ಸಹಕಾರ ಬ್ಯಾಂಕುಗಳ ಲಾಭದಲ್ಲಿ ಶೇ.3ರಷ್ಟು ವಂತಿಗೆಯನ್ನು ನೀವು ತೆಗೆದುಕೊಳ್ಳಬೇಕು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸಿದ್ದಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ.ಎಸ್. ರುದ್ರೇಶಯ್ಯ ಮಾತನಾಡಿ ತಾವು ಶೇ.1ರಷ್ಟು ಶಿಕ್ಷಣ ನಿಧಿ ವಂತಿಗೆಯನ್ನು ತೆಗೆದುಕೊಂಡು ನಮಗೆ ಹಲವಾರು ತರಬೇತಿ, ಕಾರ್ಯಾಗಾರ, ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ನಮಗೆ ಸವಲತ್ತುಗಳನ್ನು ಕೊಡುತ್ತಿದ್ದೀರಿ. ಸಹಕಾರ ಮಹಾಮಂಡಳವು ಶೇ.2ರಷ್ಟು ಶಿಕ್ಷಣ ನಿಧಿ ವಂತಿಗೆಯನ್ನು ತೆಗೆದುಕೊಂಡು ಯಾವುದೇ ನಮಗೆ ಸೇವೆಯನ್ನು ನೀಡುತ್ತಿಲ್ಲ. ಮಹಾಮಂಡಳದಲ್ಲಿ 17 ಸೌಹಾರ್ದ ಸಹಕಾರ ಬ್ಯಾಂಕುಗಳು ಸದಸ್ಯತ್ವವನ್ನು ಹೊಂದಿವೆ. ಅವು ನಿಮಗೆ ಶೇ.1ರಷ್ಟು ಶಿಕ್ಷಣ ನಿಧಿಯನ್ನು ಕೊಡುತ್ತಿವೆಯೇ. ಸೌಹಾರ್ದ ಸಹಕಾರ ಬ್ಯಾಂಕುಗಳ ಶಿಕ್ಷಣ ವಂತಿಗೆಯನ್ನು ತಾವು ಪಡೆಯಬೇಕು ಎಂದರು.

ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರು ಮಾತನಾಡಿ ಸಿದ್ದಗಂಗಾ ಅರ್ಬನ್ ಬ್ಯಾಂಕಿನ ಬಿ.ಎಸ್. ರುದ್ರೇಶಯ್ಯ ನವರು ಎರಡು ವಿಷಯಗಳನ್ನು ಹೇಳಿದರು. ಶೇ.2ರಷ್ಟು ಶಿಕ್ಷಣ ನಿಧಿ ವಂತಿಕೆಯನ್ನು ಸಹಕಾರ ಮಹಾಮಂಡಳಕ್ಕೆ ಕೊಡತ್ತಾ ಇದ್ದೇವೆ. ಅವರು ಕೊಡತಕ್ಕಂತಹ ಸೇವೆ ಇಲ್ಲ. ಆದ್ದರಿಂದ ಅದರ ಪ್ರಯೋಜನ ಬೇಕು. ಇಲ್ಲ ನಮ್ಮ ಮಹಾಮಂಡಳಕ್ಕೆ ಶೇ.2 ಮಾಡಬೇಕು ಎಂದು. ಮಹಾಮಂಡಳದಿಂದ ಸಹಕಾರ ಮಹಾಮಂಡಳದ ಅಧ್ಯಕ್ಷರಿಗೆ ಪತ್ರ ಬರೆದು ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನುಕೂಲ ಮಾಡಿಕೊಡಿ ಎಂದು ಹೇಳುತ್ತೇವೆ. ಇದನ್ನು ಕಡಿಮೆ ಮಾಡುವ ಸಂದರ್ಭವಲ್ಲ. ದಿನಾಂಕ:22.09.2022ರಂದು ಸಹಕಾರ

ಮಹಾಮಂಡಳದ ಮಹಾಸಭೆಗೆ ರುದ್ರೇಗೌಡರು ಹೋಗುತ್ತಾರೆ. ಅವರಿಗೆ ಮನವಿ ಮಾಡುತ್ತೇವೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಏನು ಸೇವೆ ಮಾಡುತ್ತೀರಿ ಎಂದು ಕೇಳೋಣ.

ಇನ್ನೊಂದು ಸೌಹಾರ್ದ 17 ಬ್ಯಾಂಕುಗಳಿವೆ. ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳು ಶಿಕ್ಷಣ ನಿಧಿ ವಂತಿಗೆ ಶೇ.1ರಷ್ಟು ಕೊಡಬೇಕೆಂದು ಪತ್ರ ಬರೆಯುತ್ತೇವೆ.

ಉಮಾಶಂಕರ ಉಪಾಧ್ಯರವರು ಮಾತ್ರ ಪ್ರಸ್ತಾವ ಮಾಡಿದರು ಯೂನಿಯನ್ ಉಪಯುಕ್ತ ಇಲ್ಲ ಎಂದರು. ಅದಕ್ಕೆ ನನ್ನ ಒಪ್ಪಿಗೆಯಿಲ್ಲ. ನಾವು ಎಲ್ಲಾ ಸಹಕಾರಿಗಳು ಒಂದೇ. ಸಹಕಾರ ಕ್ಷೇತ್ರ ಒಟ್ಟಾರೆ ಇರಬೇಕು. ಸಹಕಾರ ಕ್ಷೇತ್ರದ ಒಟ್ಟು ಅಭಿವೃದ್ಧಿಗೆ ನಾವು ಶ್ರಮಿಸೋಣ. ಈ ನಿಮ್ಮ ಅಭಿಪ್ರಾಯವನ್ನು ಕೈಬಿಡಬೇಕು ಎಂದರು.

ಶಿವ ಸಹಕಾರಿ ಬ್ಯಾಂಕ ಲಿ., ದಾವಣಗೆರೆ ಇದರ ಅಧ್ಯಕ್ಷರಾದ ಶ್ರೀ ಪ್ರಭು ರವರು ಮಾತನಾಡಿ ನಮಗೆ ನಮ್ಮ ಬ್ಯಾಂಕಿನಲ್ಲಿ ಮಹಾಮಂಡಳದಿಂದ ಬರುವ ಸುತ್ತೋಲೆಗಳು, ವಿಚಾರ ಸಂಕಿರಣಗಳ ಬಗ್ಗೆ ಏನು ಹೇಳುತ್ತಿಲ್ಲ. ನಿಮ್ಮಿಂದ ನಮಗೆ ಏನು ತಲುಪುತ್ತಿಲ್ಲ ಎಂದರು. ಇದಕ್ಕೆ ಮಹಾಮಂಡಳದ ಅಧ್ಯಕ್ಷರು ಮಾತನಾಡಿ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮಹಾಮಂಡಳದ ಸುತ್ತೋಲೆಗಳು, ಪತ್ರಗಳು, ವಿಚಾರ ಸಂಕಿರಣಗಳ ವಿವರಗಳು ತಲುಪುತ್ತಿವೆ ಮತ್ತು ಪತ್ರಿಕೆಗಳ ಮೂಲಕವು ಎಲ್ಲಾ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ವಿಷಯವು ತಲುಪುತ್ತಿದೆ. ಆದ್ದರಿಂದ ತಾವು ತಮ್ಮ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ಮಹಾಮಂಡಳವು ಕಳುಹಿಸುತ್ತಿರುವ ಸುತ್ತೋಲೆಗಳು, ವಿಚಾರ ಸಂಕಿರಣಗಳ ವಿವರಗಳನ್ನು ಎಲ್ಲಾ ನಿರ್ದೇಶಕರುಗಳಿಗೆ ತಿಳಿಸಬೇಕೆಂದು ತಾವು ಹೇಳಬೇಕೆಂದರು.

ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಅಂದನೂರ ಮುಪ್ಪಣ್ಣ ರವರು ಮಾತನಾಡಿ ಪತ್ರಗಳು, ಸುತ್ತೋಲೆಗಳ ಮಹಾಮಂಡಳದಿಂದ ಬರುತ್ತವೆ ಅದರ ಜೊತೆಗೆ ನಮಗೆ ಸಲಹೆಗಳನ್ನು ಕಳುಹಿಸಿದರೆ ನಮಗೆ ಅನುಕೂಲವಾಗುತ್ತದೆ ಎಂದರು. ಇದಕ್ಕೆ ಮಹಾಮಂಡಳದ ಅಧ್ಯಕ್ಷರು ಮಾತನಾಡಿ ನಿಮ್ಮ ಸಲಹೆಗಳಿಗೆ ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಸುಧಾಕರ ಭಟ್‌ರವರು ತಮ್ಮ ಸಲಹೆಗಳಿಗೆ ತಕ್ಷಣ ಸ್ಪಂದಿಸಿ ಉತ್ತರ ನೀಡುತ್ತಾರೆ. ತಕ್ಷಣ ಪತ್ರ ಬರೆಯುತ್ತಾರೆ. ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದಂತೆ ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಎನ್. ಕೇರೂರೆಯವರು ಪತ್ರಗಳನ್ನು ಬರೆಯುತ್ತಾರೆ ಎಂದರು.

ಬೆಂಗಳೂರು ಜನತಾ ಕೋ–ಆಪರೇಟಿವ್ ಬ್ಯಾಂಕಿನ ಪ್ರತಿನಿಧಿ ಸುರೇಶ್ ಮಾತನಾಡಿ ಪಂಜಾಬ್ ಮತ್ತು ಮಹಾರಾಷ್ಟ್ರ ಕೋ–ಆಪರೇಟಿವ್ (ಪಿಎಂಸಿ) ಬ್ಯಾಂಕಿನಲ್ಲಿ 42 ಕೋಟಿ ಹೂಡಿಕೆ ಮಾಡಿದ್ದೇವೆ. ಈ ಹೂಡಿಕೆ ಮೊತ್ತವು ಹಿಂದಿರುಗುತ್ತಿಲ್ಲ. ಆದ್ದರಿಂದ ತಾವು ಇದರ ಬಗ್ಗೆ ಗಮನಹರಿಸಬೇಕು ಮತ್ತು ಕ್ರೆಡಿಟ್ ಡೆಪಾಸಿಟ್ ರೇಸಿಯೊ ಬಗ್ಗೆ ಭಾರತೀಯ ರಿಜರ್ವ್ ಬ್ಯಾಂಕಿನ ಜೊತೆಗೆ ಚರ್ಚಿಸಬೇಕು ಎಂದರು. ಇದರ ಬಗ್ಗೆ ಮಹಾಮಂಡಳದ ಅಧ್ಯಕ್ಷರು ಮಾತನಾಡಿ ಪಿಎಂಸಿ ಮತ್ತು ಕಾರ್ವೆ ಬಗ್ಗೆ ನ್ಯಾಫಕಬ್ ಮಟ್ಟದಲ್ಲಿ ಆರ್‌ಬಿಐ ಜೊತೆ ಈಗಾಗಲೇ ಸಾಕಷ್ಟು ಒತ್ತಡ ಹಾಕುತ್ತಿದ್ದಾರೆ. ಇದರ ಬಗ್ಗೆ ನ್ಯಾಫಕಬ್ ಮಹಾಸಭೆಯಲ್ಲಿ ಚರ್ಚೆಯಾಗಬಹುದು. ನಿಮಗೆ ಅದರಲ್ಲಿ ಹೂಡಿಕೆ ಮಾಡಲು ಅಧಿಕಾರ ಇರಲಿಲ್ಲ. ನೀವು ಕೋರ್ಟ್‌ಗೆ ಹೋದರೆ ಅವರು ಪೈಲ್ ಮಾಡಿಕೊಳ್ಳುವುದಿಲ್ಲ. ಆದ್ದರಿಂದ ನಮ್ಮ ನ್ಯಾಫಕಬ್ ಮಹಾಸಭೆಯಲ್ಲಿ ಈ ವಿಷಯ ಪ್ರಸ್ತಾಪ ಮಾಡುತ್ತೇವೆ.

ಹನುಮಂತನಗರ ಸಹಕಾರ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಮಲ್ಲಾರಿಗೌಡ ಮಾತನಾಡಿ ಎಂ.ಡಿ. ನೇಮಕಾತಿ & ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನ ಗೊಂದಲದ ಬಗ್ಗೆ ಮತ್ತು ಬ್ಯಾಂಕಿಗೆ ಸಾಲಗಾರರು ಬರುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ ಅದನ್ನು ಆರ್‌ಬಿಐ ಜೊತೆ ನೀವು ಚರ್ಚಿಸಬೇಕು ಎಂದರು. ಇದಕ್ಕೆ ಮಹಾಮಂಡಳದ ಅಧ್ಯಕ್ಷರು ಮಾತನಾಡಿ ಮಹಾಮಂಡಳದ 56ನೇ ಮಹಾಸಭೆಯಲ್ಲಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಎಂ.ಡಿ. ನೇಮಕಾತಿ ಬಗ್ಗೆ ತಡೆ ನೀಡುವಂತೆ ಒತ್ತಾಯ ಮಾಡಿದರು. ಆದ್ದರಿಂದ ನಾವು ಹೈಕೋರ್ಟ್‌ನಲ್ಲಿ ಎಂ.ಡಿ. ನೇಮಕಾತಿಗೆ ತಡೆಯಾಜ್ಞೆ ತಂದೆವು. ಏತನ್ಮಧ್ಯೆ ಕೆಲವೊಬ್ಬರು ಬಿಓಎಂ ಮತ್ತು ಎಂ.ಡಿ. ನೇಮಕಾತಿ ಮಾಡಲ್ಲಿಕ್ಕೆ ನಿಂತಿದ್ದರು. ಕೆಲವು ಕಡೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ಗೆ ತಡೆಯಾಜ್ಞೆ ಇದೆ. ದೇಶದ ಎಲ್ಲಾ ಹೈಕೋರ್ಟ್‌ಗಳಲ್ಲೂ 5–10 ಕೇಸ್‌ಗಳಿವೆ. ಸುಪ್ರೀಂಕೋರ್ಟ್‌ನಲ್ಲಿ ಈ ಎಲ್ಲಾ ವಿಷಯಗಳು ಚರ್ಚೆಯಲ್ಲಿವೆ. ಸಂಪೂರ್ಣವಾಗಿ ಎಲ್ಲಾ ಸಹಕಾರ ಬ್ಯಾಂಕುಗಳು ತಮ್ಮ ಅಭಿಪ್ರಾಯ ಹೇಳಿದ ಮೇಲೆನೆ ನಾವು ಕೋರ್ಟ್‌ಗೆ ಹೋಗಿದ್ದು, ನಾವು ಎಲ್ಲರೂ ಪಟ್ಟಣ ಸಹಕಾರ ಬ್ಯಾಂಕುಗಳಿಗೂ ಎಂ.ಡಿ. ನೇಮಕಾತಿ ಮಾಡಿಕೊಳ್ಳಬೇಕಿತ್ತು ಎಂದರು.

ಬೆಂಗಳೂರು ಭಾವಸಾರ ಕ್ಷತ್ರೀಯ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅನಂತಕುಮಾರ ರವರು ಮಾತನಾಡಿ ಕಳೆದ ಎರಡು ವರ್ಷಗಳಿಂದ ಮೊರಟೋರಿಯಂ ನೀಡಿದ್ದು, ಸಾಲಗಳನ್ನು (Restructure) ಪುನರ್ರಚನೆ ಮಾಡಿದ್ದೇವೆ. ಇದರಿಂದ

ಬ್ಯಾಂಕುಗಳ ಲಾಭ ಗಳಿಕೆ ಕಡಿಮೆಯಾಗಿದೆ. ಇದರಿಂದ ತೊಂದರೆಯಾಗಿದೆ ಎಂದರು. ಮಹಾಮಂಡಳದ ಅಧ್ಯಕ್ಷರು ಮಾತನಾಡಿ ಸಲಹೆಗಾರರಾದ ಸುಧಾಕರ ಭಟ್ ರವರನ್ನು ಹನುಮಂತನಗರ ಸಹಕಾರ ಬ್ಯಾಂಕಿನ ಉಪಾಧ್ಯಕ್ಷರಾದ ಮಲ್ಲಾರಿಗೌಡರು ಮತ್ತು ಭಾವಸಾರ ಕ್ಷತ್ರೀಯ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಅನಂತಕುಮಾರ್ ರವರು ಚರ್ಚೆ ಮಾಡಬೇಕು ಎಂದರು.

ಶಿವ ಸಹಕಾರಿ ಬ್ಯಾಂಕ ಲಿ., ಶಿಕಾರಿಪುರ ಇದರ ಅಧ್ಯಕ್ಷರಾದ ಶ್ರೀ ಈಶ್ವರಪ್ಪಗೌಡ್ರು ಮಾತನಾಡಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಆರ್‌ಬಿಐ ನಮ್ಮ ಬ್ಯಾಂಕಿನಿಂದ ಬಂದಂತಹ ಲಾಭಕ್ಕೆ ಜಿಎಸ್‌ಟಿ ತೆಗೆದುಕೊಳ್ಳುತ್ತಿದ್ದಾರೆ. ಇವರಿಂದ ಜಿಎಸ್‌ಟಿ ಅಥವಾ ತೆರಿಗೆಯನ್ನು ಸಹಕಾರ ಸಂಘಗಳಿಗೆ ವಜಾ ಮಾಡಲು ಪ್ರಯತ್ನಿಸಿ ಎಂದರು.

ಭಟಕಳ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಶ್ರೀಧರ ನಾಯಕ ಮಾತನಾಡಿ ಪಂಜಾಬ ಮತ್ತು ಮಹಾರಾಷ್ಟ್ರ ಕೋ–ಆಪರೇಟಿವ್ ಬ್ಯಾಂಕ್ & ಖಾರ್ವಿಯಲ್ಲಿ ಹೂಡಿಕೆ ಮಾಡಿದ್ದು, ಹೂಡಿಕೆ ಮೊತ್ತವನ್ನು ಮರಳಿ ಪಡೆಯಲು ನೀವು ಸಹಕಾರ ನೀಡಬೇಕೆಂದರು. ಗುಲ್ಬರ್ಗಾದ ಶ್ರೀ ಬಾಬಾಗೌಡ ಪಾಟೀಲ ಮಾತನಾಡಿ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ರಾಜ್ಯಮಟ್ಟದ ತರಬೇತಿ ಶಿಬಿರವನ್ನು ಗುಲ್ಬರ್ಗಾದಲ್ಲಿ ಏರ್ಪಡಿಸುವಂತೆ ಕೇಳಿದ್ದೆವು. ಅದರಂತೆ ತಾವು ತರಬೇತಿ ಶಿಬಿರ ಆಯೋಜಿಸುತ್ತಿದ್ದೀರಿ. ತಮಗೆ ಧನ್ಯವಾದಗಳು. ಗುಲಬರ್ಗಾದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ಕೋ–ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರು ಮಾತನಾಡಿ ಈಗಾಗಲೇ ಕಳೆದ ಎರಡು ತಿಂಗಳಿಗೂ ಮೊದಲು ಸಹಕಾರ ಇಲಾಖೆಯ ಅಜಗಾರೂಕತೆಯಿಂದ ಬ್ಯಾಂಕುಗಳು ದಿವಾಳಿಯಾಗಿವೆ ಎಂದು ಸುಳ್ಳು ಸುದ್ದಿ ಹರಡಿವೆ. ಮತ್ತೆ ಇತ್ತೀಚೆಗೆ ಸುದ್ದಿ ಬಿತ್ತರಿಸುತ್ತಿದ್ದಾರೆ. ಆದ್ದರಿಂದ ತಾವು ವಿಧಾನಸಭೆಯ ಸೆಷನ್‌ನಲ್ಲಿ ಇದನ್ನು ಚರ್ಚೆ ಮಾಡಬೇಕು ಎಂದರು. ಮಹಾಮಂಡಳದ ಅಧ್ಯಕ್ಷರು ಮಾತನಾಡಿ ಇದರ ಚರ್ಚೆ ವಿಧಾನಸಭೆಯಲ್ಲಿ ಮಾಡುವುದು ಬೇಡ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಅಧ್ಯಕ್ಷರು ಮಾತನಾಡಿ ಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ತಮ್ಮ ಅನಿಸಿಕೆಗಳನ್ನು ನೀಡಿರುವುದಕ್ಕೆ ಕೃತಜ್ಞತೆ ಸಲ್ಲಿಸಿದರು. ಸದಸ್ಯರುಗಳು ನೀಡಿರುವ ಸಮಸ್ಯೆಗಳನ್ನು ಪರಿಹರಿಸಲು ಮಹಾಮಂಡಳ ಪ್ರಯತ್ನಿಸುವುದಾಗಿ ತಿಳಿಸಿದರು.

ಮಹಾಸಭೆಯಲ್ಲಿ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ, ಮಹಾಮಂಡಳದ ನಿರ್ದೇಶಕರುಗಳಾದ ಡಿ.ಟಿ. ಪಾಟೀಲ, ರುದ್ರೇಗೌಡ, ಅಶೋಕ ಎಂ. ಮನಗೂಳಿ, ಹೆಚ್.ಸಿ. ಕೃಷ್ಣ, ಎಂ.ಕೆ. ಪಟ್ಟಣಶೆಟ್ಟಿ, ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ, ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ, ಹರೀಶ್ ಆಚಾರ್, ಕೃಷ್ಣಮೂರ್ತಿ ಭಂಡಾರಿ, ರಾಘವ ವಿಷ್ಣು ಬಾಳೇರಿ, ಮಲಕಣ್ಣ ಡಿ. ಪಾಟೀಲ, ರಾಜಕುಮಾರ ಬಸವರಾಜ ಬಾದವಾಡಗಿ, ನಿರಂಜನ್ ಟಿ.ಎಸ್, ವಾಸು ಹೆಚ್, ರಘುನಾಥ್ ಸಿ., ಮಹಾಮಂಡಳದ ಶಿಕ್ಷಣನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಪಿ.ಎಲ್. ವೆಂಕಟರಾಮರೆಡ್ಡಿ, ಎಮ್.ಎಮ್.ಮೇಟಗುಡ್ಡ, ಶರಣಪ್ಪ ಎಸ್. ವಾರದ, ಆರ್.ಎಸ್.ಸುಬ್ರಹ್ಮಣ್ಯ, ಚಂದ್ರಮೌಳಿ ಎಸ್., ವಿಕ್ರಮ ಆರ್.ಸಿರೂರ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಎನ್. ಕೇರೂರೆ ರವರುಗಳು ಉಪಸ್ಥಿತರಿದ್ದರು. ನಂತರ ಕೊನೆಯಲ್ಲಿ ಮಹಾಮಂಡಳದ ನಿರ್ದೇಶಕರಾದ ಡಾ॥ ಎಂ.ಬಿ. ಮಂಜೇಗೌಡ ಅವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**"ಜೈ ಹಿಂದ್ ಜೈ ಕರ್ನಾಟಕ" "ಜೈ ಸಹಕಾರ"**

| | |
|---|---|
| **ಸಹಿ/–** | **ಸಹಿ/–** |
| **(ಪುಂಡಲೀಕ ಎನ್ ಕೆರೂರೆ)** | **(ಎಚ್.ಕೆ.ಪಾಟೀಲ)** |
| **ಮುಖ್ಯಕಾರ್ಯನಿರ್ವಹಣಾಧಿಕಾರಿ** | **ಅಧ್ಯಕ್ಷರು** |

# ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು

## ಸಹಕಾರ ಚಳುವಳಿ :

ಭಾರತದ ಸಹಕಾರ ಚಳುವಳಿಗೆ 116 ವರ್ಷಗಳ ಇತಿಹಾಸವಿದೆ. ಸಹಕಾರ ಚಳುವಳಿಯಲ್ಲಿ ಕರ್ನಾಟಕಕ್ಕೆ ಹಲವು ಪ್ರಥಮ ಸ್ಥಾನಗಳಿವೆ. ಭಾರತದ ಸಹಕಾರ ರಂಗದ ಪಿತಾಮಹ “ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರವರು ಏಷ್ಯಾ ಖಂಡದಲ್ಲಿಯೇ ಪ್ರಪ್ರಥಮವಾಗಿ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಕ್ರಿ.ಶ. 1905ರ ಮೇ 08ರಂದು “ಸಹಕಾರ ಪತ್ತಿನ ಸಂಘ”ವನ್ನು ಸ್ಥಾಪಿಸಿದರು. ಗ್ರಾಮೀಣ ಪ್ರದೇಶದ ಸಾಮಾನ್ಯ ಜನರು ತಮ್ಮ ಬದುಕಿಗಾಗಿ ಕೃಷಿ ಆಧಾರಿತ ಗುಡಿಕೈಗಾರಿಕೆಗಳು, ನೇಕಾರಿಕೆ, ಕಮ್ಮಾರಿಕೆ ಕುಲಕಸಬುಗಳನ್ನು ಸಹಕಾರ ವ್ಯವಸ್ಥೆ ಅಡಿಯಲ್ಲಿ ಪ್ರಾರಂಭಿಸಿದರು.



ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ,
ರಾಷ್ಟ್ರದ ಪ್ರಥಮ ಕೃಷಿ ಪತ್ತಿನ ಸಹಕಾರ
ಸಂಘದ ಸಂಸ್ಥಾಪಕರು

## ಸಹಕಾರ ಬ್ಯಾಂಕಿನ ಉಗಮ :

ಸಹಕಾರದ ತೊಟ್ಟಿಲು ಎಂಬ ಖ್ಯಾತಿ ಪಡೆದಿರುವ ಗದಗ ಜಿಲ್ಲೆಯ “ದಿ ಗದಗ-ಬೆಟಗೇರಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಕ್ರಿ.ಶ. 1905ರಲ್ಲಿ ಬೆಟಗೇರಿಯಲ್ಲಿ ದೇಶದ ಮೊಟ್ಟಮೊದಲ ಪಟ್ಟಣ ಸಹಕಾರ ಬ್ಯಾಂಕ್ ಎಂಬ ಹೆಗ್ಗಳಿಕೆಯೊಂದಿಗೆ ಪ್ರಾರಂಭವಾಯಿತು. ನಂತರ ಬಂಡವಾಳಶಾಹಿ ಕಪಿಮುಷ್ಠಿಯಿಂದ ಹೊರಬಂದ ಗ್ರಾಮೀಣ, ಬಡ ಮತ್ತು ಮಧ್ಯಮ ವರ್ಗದವರು ಆರ್ಥಿಕ ಶೋಷಣೆಯಿಂದ ಮುಕ್ತರಾಗಲು ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳನ್ನು ರಾಷ್ಟ್ರ ಹಾಗೂ ರಾಜ್ಯಗಳಲ್ಲಿ ಸ್ಥಾಪಿತವಾದವು. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ನಿಯಮ 1960ರಡಿಯಲ್ಲಿ ನೋಂದಣಿಯಾಗಿ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯಡಿ ಭಾರತೀಯ ರಿಸರ್ವ್ ಬ್ಯಾಂಕಿನ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿವೆ.

## ಮಹಾಮಂಡಳದ ಉಗಮ :

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಆಡಳಿತ ಮತ್ತು ವ್ಯವಹಾರ ಪದ್ಧತಿ ಹಾಗೂ ನೀತಿ ನಿಯಮಗಳನ್ನು ಏಕಪದ್ಧತಿಯಲ್ಲಿ ನಿರ್ವಹಿಸಲು ಅನುಕೂಲವಾಗುವಂತೆ ರಾಜ್ಯಮಟ್ಟದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವನ್ನು 30ನೇ ಜನವರಿ 1965ರಲ್ಲಿ ದಾವಣಗೆರೆಯಲ್ಲಿ ಸ್ಥಾಪಿಸಲಾಯಿತು. ನಂತರ 1976ರಲ್ಲಿ ಬೆಂಗಳೂರಿನ ಬಸವನಗುಡಿಯಲ್ಲಿ ಬಾಡಿಗೆ ಕಟ್ಟಡ ಪಡೆದು ತನ್ನ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿತು. ಮಹಾಮಂಡಳವು ಹಂತ ಹಂತವಾಗಿ ಬೆಳೆದು ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಈಗ ತನ್ನ ಎರಡು ಸ್ವಂತ ಕಟ್ಟಡದಲ್ಲಿ ಹಾಗೂ ಬೆಳಗಾವಿಯ ಅಟೊ ನಗರದಲ್ಲಿ ಭವ್ಯವಾದ ಕಟ್ಟಡಗಳನ್ನುಹೊಂದಿ ಹಲವಾರು ಕಾರ್ಯಯೋಜನೆಗಳನ್ನು ಹಮ್ಮಿಕೊಂಡು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.

ಕೇವಲ 1965ರಲ್ಲಿ 11 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, ತದನಂತರ ಮಹಾಮಂಡಳವು ತನ್ನ ಕಾರ್ಯಚಟುವಟಿಕೆಗಳನ್ನು ಹೆಚ್ಚಿಸಿ ಹೊಸ ಬ್ಯಾಂಕುಗಳಿಗೆ ಲೈಸೆನ್ಸ್ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿತು. ಈಗ ಹಾಲಿ ರಾಜ್ಯದಲ್ಲಿ ಪ್ರಸ್ತುತ 253 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಈ ಬ್ಯಾಂಕುಗಳಿಗೆ ಮಹಾಮಂಡಳವು ಮಾತೃಸಂಸ್ಥೆಯಾಗಿ ಹಲವಾರು ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವಲ್ಲಿ ಸಹಕಾರಿಯಾಗಿದೆ. ಪಟ್ಟಣ ಸಹಕಾರ ಬ್ಯಾಂಕುಗಳು ಸದಸ್ಯರಿಂದ ಷೇರು ಮತ್ತು ಠೇವಣಿಗಳನ್ನು ಪಡೆದು ಎಲ್ಲ ಬಗೆಯ ಸಾಲ ಸೌಲಭ್ಯಗಳನ್ನು ತನ್ನ ಸದಸ್ಯರಿಗೆ ಒದಗಿಸುತ್ತಿವೆ.

## ಮಹಾಮಂಡಳದ ಧ್ಯೇಯೋದ್ದೇಶಗಳು

- ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮದಡಿ ಮಹಾಮಂಡಳವು ತನ್ನ ಸದಸ್ಯರುಗಳಿಂದ 18 ಜನ ನಿರ್ದೇಶಕರನ್ನು ಚುನಾಯಿಸಿ ಆಡಳಿತ ಮಂಡಳಿಯನ್ನು ಹೊಂದಿರುತ್ತದೆ. ಈ ಆಡಳಿತ ಮಂಡಳಿಯಲ್ಲಿ ಸಹಕಾರ ಸಂಘಗಳ ನಿಬಂಧಕರು ನಾಮಿನಿಯಾಗಿ ನಿರ್ದೇಶಕರಾಗುತ್ತಾರೆ.
- ಪಟ್ಟಣ ಸಹಕಾರ ಬ್ಯಾಂಕುಗಳ ಅನೇಕ ಸಮಸ್ಯೆಗಳಿಗೆ ಮಹಾಮಂಡಳ ಸ್ಪಂದಿಸಿ ರಾಜ್ಯ ಸರ್ಕಾರ, ಸಹಕಾರ ಇಲಾಖೆ, ಕೇಂದ್ರ ಸರ್ಕಾರ, ಭಾರತೀಯ ರಿಜರ್ವ್ ಬ್ಯಾಂಕ್ ಇನ್ನಿತರೇ ಇಲಾಖೆಗಳೊಂದಿಗೆ ಸಮನ್ವಯ ಕಾಯ್ದುಕೊಂಡು ಪರಿಹಾರ ಒದಗಿಸುವಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ.
- ಬ್ಯಾಂಕಿನ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ಅನುಕೂಲವಾಗುವಂತೆ ಅಧಿಕಾರಿ / ಸಿಬ್ಬಂದಿ ವರ್ಗದವರಿಗೆ ಕಾಲಕಾಲಕ್ಕೆ ತರಬೇತಿ ನೀಡುವುದು.
- ಬ್ಯಾಂಕಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಬ್ಯಾಂಕಿಂಗ್ ವ್ಯವಹಾರವನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಲು ಸೂಕ್ತ ಮಾರ್ಗದರ್ಶನ ನೀಡುವುದು.
- ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರುಗಳಿಗೆ ಕಾಲಕಾಲಕ್ಕೆ ವಿಚಾರ ಸಂಕಿರಣ / ಕಾರ್ಯಾಗಾರಗಳನ್ನು ಏರ್ಪಡಿಸಿ ಸೂಕ್ತ ಮಾರ್ಗದರ್ಶನ ನೀಡುವುದು.
- ಬ್ಯಾಂಕಿನ ಆಧುನಿಕ ತಂತ್ರಜ್ಞಾನ ಬ್ಯಾಂಕಿಂಗ್ ತಂತ್ರಜ್ಞಾನ ಅಳವಡಿಕೆಗೆ ಸೂಕ್ತ ಸಲಹೆ ಹಾಗೂ ಅದರಿಂದ ಆಗುವ ಅನುಕೂಲತೆಗಳ ಬಗ್ಗೆ ಮಾರ್ಗದರ್ಶನ ನೀಡುವುದು.
- ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಕಿರುಪುಸ್ತಕ, ಮಾದರಿ ಉಪವಿಧಿಗಳು, ನೌಕರರಿಗೆ ಸಂಬಂಧಿಸಿದ ವೇತನ ಪರಿಷ್ಕರಣೆ ಇತ್ಯಾದಿಗಳನ್ನು ತಯಾರಿಸಿ ಒದಗಿಸುವುದು.
- ಬ್ಯಾಂಕಿನ ದೈನಂದಿನ ವ್ಯವಹಾರಗಳಿಗೆ ಸಂಬಂಧಿಸಿದ ಕಾನೂನು ಸಲಹೆಗೆ ಶೀಘ್ರವಾಗಿ ಉತ್ತರ ನೀಡುವುದು.
- ಬ್ಯಾಂಕಿನ ಸಿಬ್ಬಂದಿಗಳಿಗೆ ಮುಂಬಡ್ತಿಗೆ ಅನುಕೂಲವಾಗುವಂತೆ (DUCBM) ಡಿಪ್ಲೋಮಾ ಕೋರ್ಸ್‌ಗಳನ್ನು ಆಯೋಜಿಸುವುದು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಒಂದು ವಾರದ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಬ್ಯಾಂಕುಗಳಲ್ಲಿನ ಬಾಕಿ ಸಾಲಗಳ ವಸೂಲಾತಿಗಾಗಿ ಮಹಾಮಂಡಳವು ಪ್ರತ್ಯೇಕವಾಗಿ ದಾವಾ ಪಂಚಾಯ್ತಿ ನ್ಯಾಯಾಲಯ ಮತ್ತು ವಸೂಲಾತಿ ವಿಭಾಗವನ್ನು ಸ್ಥಾಪಿಸಿದೆ. ನ್ಯಾಯಾಲಯಗಳಲ್ಲಿ ದಾಖಲಿಸಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿಗೊಳಿಸಿ, ಬ್ಯಾಂಕುಗಳ ಸಾಲ ವಸೂಲಿಗೆ ಅನುಕೂಲ ಮಾಡಿಕೊಡುವುದು.
- ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ ಮತ್ತು ಬ್ಯಾಂಕಿಂಗ್ ಪ್ರಪಂಚ ತ್ರೈಮಾಸಿಕ ಪತ್ರಿಕೆಯ ಮೂಲಕ ಪ್ರಚಲಿತ ಬ್ಯಾಂಕಿಂಗ್ ವಿಷಯಗಳು, ಬ್ಯಾಂಕುಗಳ ಪ್ರಗತಿ ಚಿತ್ರ, ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆಗಳು, ಸಹಕಾರ ಇಲಾಖೆಯ ಅಧಿಸೂಚನೆಗಳು ಇತ್ಯಾದಿ ವಿಷಯಗಳ ಬಗ್ಗೆ ವಿವರಣೆ ನೀಡಿ ಬ್ಯಾಂಕುಗಳ ದೈನಂದಿನ ವ್ಯವಹಾರಗಳನ್ನು ಪ್ರೋತ್ಸಾಹಿಸುವುದು.
- ಮಹಾಮಂಡಳವು ಕೇಂದ್ರ ಸರ್ಕಾರದ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಶನ್ ಆಫ್ ಇಂಡಿಯಾದೊಂದಿಗೆ ಒಡಂಬಡಿಕೆ ಮಾಡಿಕೊಂಡು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮೂಲಕ ಇ-ಸ್ಟ್ಯಾಂಪಿಂಗ್ ವಿತರಣೆ ಕೇಂದ್ರಗಳನ್ನು ಪ್ರಾರಂಭಿಸಿ, ಬ್ಯಾಂಕಿಂಗೇತರ ಆದಾಯ ವೃದ್ಧಿಗೆ ಸಹಕಾರಿಯಾಗಿದೆ.

# ಮಹಾಮಂಡಳದ ಕಾರ್ಯಚಟುವಟಿಕೆಗಳು :

**"ರಾಷ್ಟ್ರದಲ್ಲಿಯೇ ಪಟ್ಟಣ ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕರ್ನಾಟಕವು ದ್ವಿತೀಯ ಸ್ಥಾನದಲ್ಲಿದ್ದು, ಈ ಸಾಧನೆಗೆ ಮಹಾಮಂಡಳವು ಅಪಾರ ಕೊಡುಗೆಯನ್ನು ನೀಡಿರುತ್ತದೆ".**

## ಪ್ರಕಟಣೆಗಳು :



ಮಹಾಮಂಡಳವು "ವಾರ್ತಾ ಪತ್ರಿಕೆ" ಹಾಗೂ "ಬ್ಯಾಂಕಿಂಗ್ ಪ್ರಪಂಚ" ಎಂಬ ತ್ರೈಮಾಸಿಕ ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಹಾಗೂ ಇತರೆ ಉಪಯುಕ್ತ ಸುದ್ದಿ / ವಿಚಾರಗಳನ್ನು ತಲುಪಿಸುವ ದೃಷ್ಟಿಯಿಂದ ಪ್ರಕಟಿಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿ ಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ. ವರ್ಣರಂಜಿತವಾಗಿ ಮುದ್ರಣಗೊಳ್ಳುತ್ತಿರುವ ನಮ್ಮ ಪ್ರಕಟಣೆಗಳು ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಷ್ಟೇ ಅಲ್ಲದೇ, ಸಹಕಾರ ಕ್ಷೇತ್ರದ ಎಲ್ಲ ವಲಯ, ಸಹಕಾರ ಶೈಕ್ಷಣಿಕ ಸಂಸ್ಥೆಗಳು, ಸಹಕಾರ ಇಲಾಖೆ, ಸಹಕಾರ ಸಚಿವಾಲಯದವರೆಲ್ಲರ ಮೆಚ್ಚುಗೆ ಪಡೆದಿವೆ. ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರಿಗೆ ಮಾರ್ಗಸೂಚಿಯಾಗಿವೆ ಎಂದು ಹೇಳಲು ತುಂಬಾ ಹರ್ಷವೆನಿಸಿದೆ.



## ಕಾನೂನು ಸಲಹೆ :

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ "ಬ್ಯಾಂಕಿಂಗ್" ವ್ಯವಹಾರಗಳಲ್ಲಿ ಉದ್ಭವಿಸಬಹುದಾದಂತಹ ದಿನನಿತ್ಯದ ಸಮಸ್ಯೆಗಳನ್ನು ಚರ್ಚಿಸಿ ಸಲಹೆ ಪಡೆಯಲು ಒಬ್ಬ ಹಿರಿಯ ಅನುಭವಿ ನಿವೃತ್ತ ಆರ್.ಬಿ.ಐ. ಅಧಿಕಾರಿಯನ್ನು ಮಹಾಮಂಡಳವು "ಬ್ಯಾಂಕಿಂಗ್ ಸಲಹೆಗಾರ" ರನ್ನಾಗಿ ನೇಮಿಸಿಕೊಳ್ಳಲಾಗಿದ್ದು, ಇ-ಮೇಲ್, ವಾಟ್ಸ್‌ಫ್, ಪತ್ರದ ಮುಖಾಂತರ ಅಥವಾ ಖುದ್ದಾಗಿ ಭೇಟಿ ನೀಡಿ ತಕ್ಷಣವೇ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಅನುಕೂಲ ಕಲ್ಪಿಸಿದೆ. ಈ ಕೆಳಗೆ ವಿವರಿಸಿದಂತೆ ಪ್ರತಿ ವರ್ಷ ಕಾನೂನು ಸಲಹೆ ಕೇಳಿ ಬರೆದ ಪತ್ರಗಳಿಗೆ ಉತ್ತರಿಸಲಾಗಿದೆ.

| ವರ್ಷ | ಕಾನೂನು ಸಲಹೆಗಳು |
|---|---|
| 2017-18 | 380 |
| 2018-19 | 350 |
| 2019-20 | 320 |
| 2020-21 | 360 |
| 2021-22 | 430 |
| 2022-23 | 450 |

## ಮಾದರಿ ಕೈಪಿಡಿಗಳು :

ಭಾರತೀಯ ರಿಜರ್ವ್ ಬ್ಯಾಂಕು ಕಾಲ ಕಾಲಕ್ಕೆ ಮಾಸ್ಟರ್ ಸುತ್ತೋಲೆಗಳಿಗೆ ತಿದ್ದುಪಡಿಗಳನ್ನು ತಂದು, ಇತ್ತೀಚೆಗೆ ಅವುಗಳಿಗೆ ಸಂಬಂಧಿಸಿದಂತೆ ಆಯಾ ಬ್ಯಾಂಕುಗಳಿಗೆ ಪಾಲಸಿಗಳನ್ನು ಮಾಡಿಕೊಳ್ಳುವಂತೆ ನಿರಂತರವಾಗಿ ಸೂಚಿಸುತ್ತಾ ಬರುತ್ತಿರುವುದು ತಮಗೆ ತಿಳಿದ ವಿಷಯವಾಗಿರುತ್ತದೆ. ಸದರಿ ಪಾಲಿಸಿಗಳನ್ನು 100ಕ್ಕೆ 98ರಷ್ಟು ಬ್ಯಾಂಕುಗಳು ನಮ್ಮ ಮಹಾಮಂಡಳಕ್ಕೆ ಪತ್ರ ಅಥವಾ ಈ-ಮೇಲ್ ಕಳುಹಿಸಿ ಮಾದರಿ ಪಾಲಿಸಿಗಳನ್ನು ತಯಾರಿಸಿ ಕಳುಹಿಸುವಂತೆ ನಿರಂತರವಾಗಿ ಕೇಳಿಕೊಳ್ಳಲಾಗುತ್ತದೆ. ಈ ಹಿನ್ನಲೆಯಲ್ಲಿ ನಮ್ಮ ಮಹಾಮಂಡಳದ ಸಲಹೆಗಾರರು ತಮ್ಮ ಕೋರಿಕೆಯಂತೆ ಅವುಗಳನ್ನು ಅಧ್ಯಯನ ಮಾಡಿ ತಯಾರಿಸಿ ಮಹಾಮಂಡಳದಿಂದ ಉಚಿತವಾಗಿ ಕಳುಹಿಸಿ ಕೊಡಲಾಗಿದೆ.

1. URBAN CO-OP BANKS MODEL BYE LAW
2. Know Your Customer (KYC) & Anti-Money Laundering (AML) Policy
3. Investment Policy for Urban Co-operative Banks
4. Deposit Policy for Urban Co-operative Banks
5. Model Loan Policy for Urban Co-operative Banks
6. Cyber Security Policy for Urban Co-operative Banks
7. POLICY ON APPOINTMENT OF STATUTORY AUDITORS
8. Staff accountability Policy of UCBs
9. OTS Policy for UCBS
10. Safe Deposit Locker Agreement Policy for UCBs
11. Risk Management Policy for UCBs
12. Policy on Security Planning
13. Policy on Risk based internal Audit
14. Policy for Technical Writ-off of NPAs
15. H R Policy
16. Grievance redressal Policy
17. ALM Policy
18. Information Executive Policy
19. Complains Policy
20. Business continuity and disaster recovery policy

## ರಾಜ್ಯ ಸರ್ಕಾರ – ದಾವಾ ಪಂಚಾಯ್ತಿ ನ್ಯಾಯಾಲಯ :



2004–05ರಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಗೆಂದೇ ಪ್ರತ್ಯೇಕವಾಗಿ ದಾವಾ ಪಂಚಾಯ್ತಿ ನ್ಯಾಯಾಲಯ ಮಹಾಮಂಡಳದಲ್ಲಿ ಅಸ್ತಿತ್ವಕ್ಕೆ ಬಂದು ಬೆಂಗಳೂರು ಕೇಂದ್ರ ಕಛೇರಿ ಹಾಗೂ ಹುಬ್ಬಳ್ಳಿ ಪ್ರಾಂತೀಯ ಕಛೇರಿಗಳು ಕಳೆದ 18 ವರ್ಷಗಳಿಂದ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕಛೇರಿಗಳಿಗೆ ಸಹಕಾರ ಸಂಘಗಳ ಅಪರ / ಸಂಯುಕ್ತ ನಿಬಂಧಕರುಗಳು ಪೀಠಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಈ ಕಛೇರಿಗಳಲ್ಲಿ ದಾವಾ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ.

## THE KARNATAKA STATE COOPERATIVE URBAN BANKS FEDERATION LTD

### Year wise status of disputes before arbitration Courts for UCBs

| Years | Opening Balance | Cases Field | Total Cases | Cases Disposal | Cases Pendancy |
|---|---|---|---|---|---|
| 2004-05 | 27594 | | | | 27594 |
| 2005-06 | 27594 | 557 | 28151 | 23049 | 5102 |
| 2006-07 | 5102 | 24344 | 29446 | 25546 | 3900 |
| 2007-08 | 3900 | 18123 | 22023 | 19220 | 2803 |
| 2008-09 | 2803 | 13372 | 16175 | 13144 | 3031 |
| 2009-10 | 3031 | 9731 | 12762 | 11238 | 1524 |
| 2010-11 | 1524 | 7207 | 8731 | 7514 | 1217 |
| 2011-12 | 1618 | 6692 | 8310 | 6758 | 1552 |
| 2012-13 | 1552 | 5716 | 7268 | 5576 | 1692 |
| 2013-14 | 1692 | 4190 | 5882 | 4410 | 1472 |

| Years | Opening Balance | Cases Field | Total Cases | Cases Disposal | Cases Pendancy |
|---|---|---|---|---|---|
| 2014-15 | 1472 | 3859 | 5331 | 4189 | 1142 |
| 2015-16 | 980 | 4178 | 5158 | 3984 | 1174 |
| 2016-17 | 1174 | 3674 | 4848 | 3265 | 1583 |
| 2017-18 | 1583 | 4312 | 5895 | 4191 | 1704 |
| 2018-19 | 1704 | 4303 | 6007 | 3943 | 2064 |
| 2019-20 | 2064 | 2804 | 4868 | 3357 | 1511 |
| 2020-21 | 1511 | 2528 | 4039 | 2453 | 1586 |
| 2021-22 | 1586 | 3199 | 4785 | 3143 | 1642 |
| 2022-23 | 1642 | 3051 | 4693 | 3931 | 762 |

ಈ ಮೇಲೆ ವಿವರಿಸಿದಂತೆ ಬೆಂಗಳೂರು ಮತ್ತು ಹುಬ್ಬಳ್ಳಿ ದಾವಾ ಪಂಚಾಯಿತಿ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿರುತ್ತದೆ.

## ರಾಜ್ಯ ಸರ್ಕಾರ – ಸಾಲ ವಸೂಲಾಧಿಕಾರಿಗಳವರ ಕಛೇರಿ :

2004–05ರಲ್ಲಿ ರಾಜ್ಯದಲ್ಲಿನ ಪಟ್ಟಣ ಸಹಕಾರ ಬ್ಯಾಂಕುಗಳಿಗೆಂದೇ ಪ್ರತ್ಯೇಕವಾಗಿ ಸಾಲ ವಸೂಲಾಧಿಕಾರಿಗಳ ಕಛೇರಿಗಳು ಮಹಾಮಂಡಳದಲ್ಲಿ ಅಸ್ತಿತ್ವಕ್ಕೆ ಬಂದಿವೆ. ಬೆಂಗಳೂರು ಕೇಂದ್ರ ಹಾಗೂ ಹುಬ್ಬಳ್ಳಿ ಪ್ರಾಂತೀಯ ಕಛೇರಿಗಳು ಕಳೆದ 18 ವರ್ಷಗಳಿಂದ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿವೆ. ಈ ಕಛೇರಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು ವಸೂಲಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಈ ಕಛೇರಿಗಳಲ್ಲಿ ಅಮಲ್ಜಾರಿ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತಿದೆ. ಸಾಲ ವಸೂಲಾಧಿಕಾರಿಗಳ ಕಛೇರಿಗಳು ಬ್ಯಾಂಕುಗಳ ಅನುತ್ಪಾದಕ ಆಸ್ತಿ ಪ್ರಮಾಣವನ್ನು ನಿಯಂತ್ರಣಕ್ಕೆ ತರುವಲ್ಲಿ ಸಹಕಾರಿಯಾಗಿವೆ.

## ಭಾರತೀಯ ರಿಸರ್ವ್ ಬ್ಯಾಂಕ್ – ಟ್ಯಾಫ್‌ಕಬ್ :







ಪಟ್ಟಣ ಸಹಕಾರ ಬ್ಯಾಂಕುಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಚರ್ಚೆ ನಡೆಯುವಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಮಟ್ಟದಲ್ಲಿ "ಪಟ್ಟಣ ಸಹಕಾರ ಬ್ಯಾಂಕುಗಳ ಸಮನ್ವಯ ಸಮಿತಿ" (TAFCUB)ಯನ್ನು ರಚಿಸಲಾಗಿದ್ದು, ಮಹಾಮಂಡಳದಿಂದ ಒಬ್ಬ ಪ್ರತಿನಿಧಿಯು ಆ ಸಮಿತಿಯ ಸದಸ್ಯ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬೆಂಗಳೂರಿನ ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಸಭೆ ಸೇರಿ ಸಮಾಲೋಚನೆ ಮಾಡುತ್ತದೆ.

ಟ್ಯಾಫ್‌ಕಬ್ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಬ್ಯಾಂಕಿಂಗ್ ವ್ಯವಹಾರಗಳ ಮೇಲೆ ತೀವ್ರ ನಿಗಾ ವಹಿಸುತ್ತಿದ್ದು, ಅಶಕ್ತ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಗುರುತಿಸಿ ಅವುಗಳ ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಚರ್ಚಿಸಿ ಪೂರಕವಾದ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ. ಅಲ್ಲದೆ, ಒಟ್ಟಾರೆಯಾಗಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಉದ್ಭವಿಸಬಹುದಾದ ಆರ್ಥಿಕ ಹಾಗೂ ಕಾನೂನಾತ್ಮಕ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಮಿತಿ ಮಾಡುವ ಶಿಫಾರಸ್ಸಿನನ್ವಯ ಭಾರತೀಯ ರಿಸರ್ವ್ ಬ್ಯಾಂಕು ಆದೇಶಗಳನ್ನು / ಸುತ್ತೋಲೆಗಳನ್ನು ಹೊರಡಿಸುತ್ತಿದ್ದು, ಬ್ಯಾಂಕುಗಳು ನೀತಿ–ನಿರೂಪಣೆಯನ್ನು ಪಾಲಿಸುವ ನಿಟ್ಟಿನಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವಲ್ಲಿ ಸಹಕಾರಿಯಾಗಿವೆ.

ಮಹಾಮಂಡಳದ ಪ್ರಾತಿನಿಧ್ಯ ಹೊಂದಿರುವ ಈ ಸಮನ್ವಯ ಸಮಿತಿಯು ಕಾರ್ಯಚಟುವಟಿಕೆಯಲ್ಲಿ, ಪಾಲ್ಗೊಳ್ಳುವಿಕೆಯಲ್ಲಿ, ಪಟ್ಟಣ ಸಹಕಾರ ಬ್ಯಾಂಕುಗಳ ಅಭಿವೃದ್ಧಿಗೆ ಪೂರಕವಾದ ಸಲಹೆ, ಸೂಚನೆ ಹಾಗೂ ಅಭಿಪ್ರಾಯ ವ್ಯಕ್ತಪಡಿಸುವುದರಲ್ಲಿ ದೇಶದ ಇತರೆ ಸಮನ್ವಯ ಸಮಿತಿಗಳಿಗಿಂತ ಮುಂಚೂಣಿಯಲ್ಲಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸಂತಸ ವ್ಯಕ್ತಪಡಿಸಿದೆ.




## ಕೇಂದ್ರ ಸರ್ಕಾರ – ಇ–ಸ್ಟಾಂಪಿಂಗ್ :

ಸರ್ಕಾರವು 2010ರಲ್ಲಿ ಪ್ರಮುಖ ಯೋಜನೆಗಳಲ್ಲಿ ಒಂದಾದ ಇ–ಸ್ಟ್ಯಾಂಪಿಂಗ್ – ಸ್ಟಾಂಪ್ ಪೇಪರ್ ವಿತರಣೆಯನ್ನು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮೂಲಕ ಸಾರ್ವಜನಿಕರಿಗೆ ವಿತರಿಸುವ ಮಹತ್ತರ ಕಾರ್ಯವನ್ನು ಮಹಾಮಂಡಳಕ್ಕೆ ವಹಿಸಿಕೊಟ್ಟಿದ್ದು, ಈ ನಿಟ್ಟಿನಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮೂಲಕ ಇ–ಸ್ಟ್ಯಾಂಪಿಂಗ್ ಕೇಂದ್ರಗಳನ್ನು ಸ್ಥಾಪಿಸಿ, ತನ್ಮೂಲಕ ಬ್ಯಾಂಕಿಂಗೇತರ ಆದಾಯ ವೃದ್ಧಿಗೆ ಮಹಾಮಂಡಳ ಸಹಕಾರಿಯಾಗಿದೆ. ಅಲ್ಲದೆ, ನಮ್ಮ ಬ್ಯಾಂಕುಗಳು ಅಳವಡಿಸಿಕೊಂಡಿರುವ ಪ್ರಮುಖ ಸೇವೆಗಳಲ್ಲಿ ಇದೂ ಒಂದಾಗಿ ಗ್ರಾಹಕರ ಆಕರ್ಷಣೆಗೆ ಅನುಕೂಲ ಕಲ್ಪಿಸಿಕೊಟ್ಟಂತಾಗಿದೆ. 2010ರಲ್ಲಿ ಇ–ಸ್ಟ್ಯಾಂಪಿಂಗ್ ವಿತರಣಾ ಯೋಜನೆಯನ್ನು ಜಾರಿಗೆ ತಂದು ಇಲ್ಲಿಯವರೆವಿಗೆ 136 ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಅವುಗಳ ಶಾಖೆಗಳು ಸೇರಿದಂತೆ ಒಟ್ಟು 218 ಇ–ಸ್ಟ್ಯಾಂಪಿಂಗ್ ಕೇಂದ್ರಗಳನ್ನು ಹೊಂದಿ ವಹಿವಾಟು ನಡೆಸುತ್ತಿವೆ.

## ಡಿಪ್ಲೋಮಾ ಶಿಕ್ಷಣ :




ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿ / ಅಧಿಕಾರಿಗಳಿಗೆ ಮುಂಬಡ್ತಿ ಮತ್ತು ಬ್ಯಾಂಕಿನ ಬೆಳವಣಿಗೆಗೆ ಅನುಕೂಲಕರವಾಗುವಂತೆ "Diploma in Urban Co-op Banking Management" (DUCBM) ಕೋರ್ಸ್‌ನ್ನು ಈಗಾಗಲೇ ಪ್ರಾರಂಭಿಸಿದೆ. ಈ ಕೋರ್ಸನ್ನು ದೂರ ಶಿಕ್ಷಣದ ಮೂಲಕ ನೀಡಲಾಗುತ್ತಿದೆ. ಸದರಿ ಕೋರ್ಸ್‌ಗೆ ಬ್ಯಾಂಕಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪ್ರವೇಶ ಪಡೆದು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಿದ್ದಾರೆ. ಈವರೆಗೆ ಒಂಬತ್ತು (9) ಬ್ಯಾಚುಗಳ ಫಲಿತಾಂಶ ಬಂದಿದ್ದು, ಅದರ ವಿವರಗಳು ಈ ಕೆಳಗಿನಂತಿದೆ.

| Number of Batches | Number of Employees Passed |
|---|---|
| Diploma in Urban Co-op Banking Management Batch-1 | 408 |
| Diploma in Urban Co-op Banking Management Batch-2 | 341 |
| Diploma in Urban Co-op Banking Management Batch-3 | 528 |
| Diploma in Urban Co-op Banking Management Batch-4 | 245 |
| Diploma in Urban Co-op Banking Management Batch-5 | 282 |
| Diploma in Urban Co-op Banking Management Batch-6 | 287 |
| Diploma in Urban Co-op Banking Management Batch-7 | 240 |
| Diploma in Urban Co-op Banking Management Batch-8 | 151 |
| **Total** | **2,482** |

## ಶಿಕ್ಷಣ, ತರಬೇತಿ ಮತ್ತು ವಿಚಾರ ಸಂಕಿರಣ :

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳು ಕಾಯ್ದೆ–ಕಾನೂನುಗಳ ಚೌಕಟ್ಟಿನೊಳಗೆ ಸರಳ ಹಾಗೂ ನಿಖರವಾಗಿ ಕಾರ್ಯನಿರ್ವಹಿಸುವಂತಾಗಲು ಆಡಳಿತ ಮಂಡಳಿ ಸದಸ್ಯರನ್ನೊಳಗೊಂಡು ಎಲ್ಲಾ ಸಿಬ್ಬಂದಿ ವರ್ಗದವರುಗಳಿಗೆ ಕಾಲ ಕಾಲಕ್ಕೆ ವಾರ್ಷಿಕ ವೇಳಾಪಟ್ಟಿ ಸಿದ್ಧಪಡಿಸಿ ತನ್ಮೂಲಕ ತರಬೇತಿ ಶಿಬಿರ, ವಿಚಾರ ಸಂಕಿರಣ, ಕಾರ್ಯಾಗಾರ ಹಾಗೂ ನಿಶ್ಚಿತ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಶುಲ್ಕರಹಿತವಾಗಿ ಏರ್ಪಡಿಸುತ್ತಿದ್ದು, ಈ ಬಗ್ಗೆ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮೆಚ್ಚುಗೆಗೆ ಪಾತ್ರವಾಗಿದೆ. ವರದಿ ಸಾಲಿನಲ್ಲಿ 18 ವಿಚಾರ ಸಂಕಿರಣ ಕಾರ್ಯಾಗಾರಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಭೌತಿಕವಾಗಿ ಏರ್ಪಡಿಸಲಾಗಿತ್ತು. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ 2000ಕ್ಕೂ ಹೆಚ್ಚು ಪ್ರತಿನಿಧಿಗಳು ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಭಾಗವಹಿಸಿರುತ್ತಾರೆ. ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣಾ ಅಭಿವೃದ್ಧಿ ತರಬೇತಿ ಶಿಬಿರಗಳನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯೊಂದಿಗೆ ಮಹಾಮಂಡಳವು ತಿಂಗಳಿಗೊಂದು ಏರ್ಪಡಿಸುತ್ತಿದೆ.

# ಮಹಾಮಂಡಳದ ತರಬೇತಿ ಹಾಗೂ ವಿಚಾರ ಸಂಕಿರಣಗಳ ವಿವರ

## ದಿನಾಂಕ : 01.04.2022 ರಿಂದ 31.03.2023ರವರೆಗೆ

| ಕ್ರ. ಸಂ. | ವಿಷಯಗಳು | ದಿನಾಂಕ | ಸ್ಥಳ | ಹಾಜರಾದ ಪ್ರತಿನಿಧಿಗಳ ಸಂಖ್ಯೆ |
|---|---|---|---|---|
| 1 | ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ, ಹಿರಿಯ ಅಧಿಕಾರಿ ಹಾಗೂ ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಿಗೆ ಬೆಳಗಾವಿಯಲ್ಲಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 22.04.2022 | ಬೆಳಗಾವಿ | 175 |
| 2. | ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 13.05.2022 | ಮಡಿಕೇರಿ | 150 |
| 3. | ಮಹಾಮಂಡಳದ ಹುಬ್ಬಳ್ಳಿ ಪ್ರಾಂತೀಯ ಕಛೇರಿಯ ದಾವಾ ಪಂಚಾಯಿತಿ ನ್ಯಾಯಾಲಯವು ಬೆಳಗಾವಿ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಬ್ಯಾಂಕಿನ ದಾವಾ ಪ್ರಕರಣ ದಾಖಲಿಸುವ ಬಗ್ಗೆ ಅನುಸರಿಸಬೇಕಾದ ಅಂಶಗಳ ಕುರಿತು. | 24.05.2022 | ಬೆಳಗಾವಿ | 60 |
| 4. | ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ ಶಿಬಿರ. | 20.06.2022 ರಿಂದ 24.06.2022 | ಬೆಂಗಳೂರು (ಆರ್.ಐ.ಸಿ.ಎಂ) | 57 |
| 5. | ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 25.06.2022 | ಬೆಂಗಳೂರು | 230 |
| 6. | ಮಹಾಮಂಡಳದ ಹುಬ್ಬಳ್ಳಿ ಪ್ರಾಂತೀಯ ಕಛೇರಿಯ ದಾವಾ ಪಂಚಾಯಿತಿ ನ್ಯಾಯಾಲಯವು ಗದಗ, ಧಾರವಾಡ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಬ್ಯಾಂಕಿನ ದಾವಾ ಪ್ರಕರಣ ದಾಖಲಿಸುವ ಬಗ್ಗೆ ಅನುಸರಿಸಬೇಕಾದ ಅಂಶಗಳ ಕುರಿತು. | 30.06.2022 | ಹುಬ್ಬಳ್ಳಿ | 70 |
| 7 | ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 22.07.2022 | ಕೂಡಲಸಂಗಮ | 300 |


| | | | | |
|---|---|---|---|---|
| 7. | ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ ಶಿಬಿರ. | 25.07.2022 ರಿಂದ 29.07.2022 | ಬೆಂಗಳೂರು (ಆರ್.ಐ.ಸಿ.ಎಂ) | 50 |
| 8. | ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮಾಹಿತಿ ತಂತ್ರಜ್ಞಾನ ವಿಷಯವಾಗಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 26.08.2022 | ಬೆಂಗಳೂರು | 250 |
| 9. | ಪಟ್ಟಣ ಸಹಕಾರ ಬ್ಯಾಂಕುಗಳ ಆದಾಯ ತೆರಿಗೆ ಕುರಿತು ಪಟ್ಟಣ ಸಹಕಾರ ಬ್ಯಾಂಕುಗಳ ವೃತ್ತಿಪರ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್. | 09.09.2022 | ಬೆಂಗಳೂರು | 175 |
| 10. | ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | 28.09.2022 | ಗುಲ್ಬರ್ಗಾ | 120 |
| 11. | ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳ ಐದು ದಿನಗಳ ವಿಶೇಷ ತರಬೇತಿ ಶಿಬಿರ | 26.09.2022 ರಿಂದ 30.09.2022 | ಬೆಂಗಳೂರು (ಆರ್.ಐ.ಸಿ.ಎಂ) | 50 |
| 12. | ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | 16.10.2022 | ತುಮಕೂರು | 200 |
| 13. | ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 10.12.2022 | ಶಿರಸಿ | 200 |
| 14. | ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಮೂರು ದಿನಗಳ ವಿಶೇಷ ತರಬೇತಿ ಶಿಬಿರ | 26.12.2022 ರಿಂದ 28.12.2022 | ಬೆಂಗಳೂರು (ಆರ್.ಐ.ಸಿ.ಎಂ) | 60 |
| 15. | ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | 28.01.2023 | ಮಂಗಳೂರು | 200 |
| 16. | ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್ | 21.02.2023 | ಬೆಂಗಳೂರು. | 300 |
| 17. | ಪಟ್ಟಣ ಸಹಕಾರ ಬ್ಯಾಂಕುಗಳ ಪ್ರಗತಿ ಪರಿಶೀಲನಾ ಸಭೆ | 17.03.2023 | ಬೆಂಗಳೂರು | 79 |
| 18. | ಕೆವೈಸಿ / ಸಿಕೆವೈಸಿ ಮಾರ್ಗಸೂಚಿಗಳ ಕುರಿತು ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಅಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್ | 27.03.2023 | ಬೆಂಗಳೂರು | 200 |

## ಮಹಾಮಂಡಳದ ತರಬೇತಿ ಹಾಗೂ ವಿಚಾರ ಸಂಕಿರಣಗಳ ವಿವರ

### ದಿನಾಂಕ : 01.04.2023 ರಿಂದ 31.03.2024ರವರೆಗೆ

| ಕ್ರ. ಸಂ. | ವಿಷಯಗಳು | ದಿನಾಂಕ | ಸ್ಥಳ | ಹಾಜರಾದ ಪ್ರತಿನಿಧಿಗಳ ಸಂಖ್ಯೆ |
|---|---|---|---|---|
| 1. | ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಮತ್ತು ಹಿರಿಯ ಅಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಪರೆನ್ಸ್ | 25.04.2023 | ಬೆಂಗಳೂರು | 150 |
| 2. | ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ ಶಿಬಿರ. | 15.05.2023 ರಿಂದ 19.05.2023 | ಬೆಂಗಳೂರು (ಆರ್.ಐ.ಸಿ.ಎಂ) | 54 |
| 3. | ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷ/ ಉಪಾಧ್ಯಕ್ಷರು ಮತ್ತು ನಿರ್ದೇಶಕರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 09.06.2023 | ಮೈಸೂರು | 180 |
| 4. | ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷ ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಹಿರಿಯ ಅಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಪರೆನ್ಸ್ | 20.06.2023 | ಬೆಂಗಳೂರು | 175 |
| 5. | ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಹಿರಿಯ ಅಧಿಕಾರಿಗಳಿಗೆ ಬೆಳಗಾವಿಯಲ್ಲಿ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 27.06.2023 | ಬೆಳಗಾವಿ | 175 |
| 6. | ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರು ಹಾಗೂ B.O.M. ಸದಸ್ಯರುಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | 25.06.2023 | ಬೆಂಗಳೂರು | 230 |
| 7. | ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ ಶಿಬಿರ. | 31.07.2023 ರಿಂದ 04.08.2023 | ಬೆಂಗಳೂರು (ಆರ್.ಐ.ಸಿ.ಎಂ) | 35 |
| 8. | ಮಹಿಳಾ ಪಟ್ಟಣ ಸಹಕಾರ ಬ್ಯಾಂಕುಗಳ ಮಹಿಳಾ ನಿರ್ದೇಶಕರು/ಮಹಿಳಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ | 26.08.2023 | ವಿಜಯಪುರ | 150 |
| 9. | ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷ/ ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | ಸೆಪ್ಟೆಂಬರ್–2023 | ಮಂಗಳೂರು/ ಉಡುಪಿ | |

| | | | | |
|---|---|---|---|---|
| 10. | ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | ಅಕ್ಟೋಬರ್ – 2023 | ಬೆಂಗಳೂರು | |
| 11. | ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರು ಹಾಗೂ B.O.M. ಸದಸ್ಯರುಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ. | ಅಕ್ಟೋಬರ್ – 2023 | ಹೊಸಪೇಟೆ | |
| 12. | ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | ನವಂಬರ್ – 2023 | ಹುಬ್ಬಳ್ಳಿ | |
| 13. | ಅಖಿಲ ಭಾರತ ಸಹಕಾರ ಸಪ್ತಾಹ 2023 | ನವಂಬರ್ – 2023 | | |
| 14. | ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | ಡಿಸೆಂಬರ್ – 2023 | ಹಾಸನ | |
| 15. | ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳ ಐದು ದಿನಗಳ ವಿಶೇಷ ತರಬೇತಿ ಶಿಬಿರ | ಡಿಸೆಂಬರ್ – 2023 | ಬೆಂಗಳೂರು (ಆರ್.ಐ.ಸಿ.ಎಂ) | |
| 16. | ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | ಜನವರಿ – 2024 | ದಾವಣಗೆರೆ | |
| 17. | ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ | ಫೆಬ್ರವರಿ – 2024 | ಹೊನ್ನಾವರ/ ಕಾರವಾರ | |



**“ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು”**

**– ಮಹಾತ್ಮ ಗಾಂಧೀಜಿ**

**“ಗ್ರಾಮಕ್ಕೊಂದು ಶಾಲೆ, ಪಂಚಾಯಿತಿ ಹಾಗೂ ಸಹಕಾರಿ ಸಂಘ ಇದ್ದಲ್ಲಿ ಗ್ರಾಮಾಭಿವೃದ್ಧಿ ಸಾಧ್ಯ”**

**– ಜವಾಹರಲಾಲ್ ನೆಹರು**



# ಪಟ್ಟಣ ಸಹಕಾರ ಬ್ಯಾಂಕುಗಳ ಕ್ರೋಢೀಕೃತ ಅಂಕಿ–ಅಂಶಗಳ

## ಪಕ್ಷಿನೋಟ ದಿನಾಂಕ : 31.03.2023

| Sl No.<br>ಕ್ರ.ಸಂ. | PARTICULARS<br>ವಿವರಗಳು | NO/AMOUNT<br>ಸಂಖ್ಯೆ / ಮೊತ್ತ |
|---|---|---|
| 1 | Number of Bank / ಬ್ಯಾಂಕುಗಳ ಸಂಖ್ಯೆ | 253 |
| 2 | Number of Branches / ಶಾಖೆಗಳ ಸಂಖ್ಯೆ | 1054 |
| 3 | Total Members / ಒಟ್ಟು ಸದಸ್ಯರು | 2362974 |
| 4 | No of Employees / ಉದ್ಯೋಗಿಗಳ ಸಂಖ್ಯೆ | 8400 |

(Rs in Crores ರೂ. ಕೋಟಿಗಳಲ್ಲಿ)

| | | |
|---|---|---|
| 5 | Share Capital ಷೇರು ಬಂಡವಾಳ | 1723.32 |
| 6 | Total Reserve and Other Funds<br>ಒಟ್ಟು ಕಾಯ್ದಿಟ್ಟ ಮತ್ತು ಇತರೇ ನಿಧಿಗಳು | 7624.91 |
| 7 | TOTAL DEPOSITS ಒಟ್ಟು ಠೇವಣಿಗಳು | 47258.28 |
| 8 | NET PROFIT/LOSS(+/-) ನಿವ್ವಳ ಲಾಭ / ನಷ್ಟ (+/–) | 426.71 |
| 9 | WORKING CAPITAL ದುಡಿಯುವ ಬಂಡವಾಳ | 56087.36 |
| 10 | TOTAL INVESTMENTS ಒಟ್ಟು ಹೂಡಿಕೆಗಳು | 19745.83 |
| 11 | LOANS & ADVANCES ಸಾಲ ಮತ್ತು ಮುಂಗಡಗಳು | 29799.71 |
| 12 | GROSS NPA (amount) ಒಟ್ಟು ಎನ್‌ಪಿಎ (ಮೊತ್ತ) | 4192.06 |
| 13 | Gross NPA % ಒಟ್ಟು ಎನ್‌ಪಿಎ % (ಪ್ರತಿಶತ) | 14.06 |



ದಿನಾಂಕ : 22.06.2023ರಂದು ಮಹಾಮಂಡಳದ ಆಡಳಿತ ಸಭಾಂಗಣದಲ್ಲಿ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣರವರಿಗೆ ಅಭಿನಂದನಾ ಸಮಾರಂಭ. ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್. ಕೆ. ಪಾಟೀಲರವರು ಮತ್ತು ಉಪಾಧ್ಯಕ್ಷರಾದ ಶ್ರೀ ಬಿ. ಎಸ್. ಪರಮಶಿವಯ್ಯ ಹಾಗೂ ಆಡಳಿತ ಮಂಡಳಿ ಸದಸ್ಯರು ಸಲಹಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

# ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಕ್ರೋಢೀಕೃತ ಜಿಲ್ಲಾವಾರು ಅಂಕಿ-ಅಂಶಗಳ ಪಕ್ಷಿನೋಟ ದಿನಾಂಕ : 31.03.2023

| | | | | | ರೂ.ಕೋಟಿಗಳಲ್ಲಿ | | | | | | |
|---|---|---|---|---|---|---|---|---|---|---|---|
| ಜಿಲ್ಲೆಯ ಹೆಸರು | ಬ್ಯಾಂಕಗಳ ಸಂಖ್ಯೆ | ಶಾಖೆಗಳ ಸಂಖ್ಯೆ | ಒಟ್ಟು ಸದಸ್ಯರು | ಉದ್ಯೋಗಿಗಳ ಸಂಖ್ಯೆ | ಷೇರು ಬಂಡವಾಳ | ಕಾಯ್ದಿಟ್ಟ ಮತ್ತು ಇತರೇ ನಿಧಿಗಳು | ಒಟ್ಟು ಠೇವಣಿಗಳು | ನಿವ್ವಳ ಲಾಭ | ದುಡಿಯುವ ಬಂಡವಾಳ | ಒಟ್ಟು ಹೂಡಿಕೆಗಳು | ಸಾಲ ಮತ್ತು ಮುಂಗಡಗಳು |
| ಬೆಂಗಳೂರು | 48 | 251 | 673724 | 2413 | 760.67 | 3075.76 | 18686.10 | 150.00 | 22459.39 | 7857.73 | 11439.49 |
| ಬೆಳಗಾವಿ | 37 | 163 | 227162 | 1034 | 85.12 | 476.71 | 3807.34 | 34.83 | 4487.85 | 1693.27 | 2328.65 |
| ಬಳ್ಳಾರಿ | 5 | 17 | 33462 | 137 | 29.39 | 90.78 | 978.92 | 11.31 | 1101.23 | 362.25 | 572.79 |
| ಬೀದರ | 3 | 7 | 16726 | 53 | 5.55 | 21.82 | 267.81 | 1.55 | 305.64 | 108.27 | 163.77 |
| ಬಾಗಲಕೋಟ | 13 | 97 | 199113 | 789 | 113.69 | 325.39 | 3535.45 | 17.92 | 4148.84 | 1272.16 | 2329.15 |
| ಚಿತ್ರದುರ್ಗ | 3 | 16 | 15745 | 90 | 7.78 | 50.02 | 330.06 | 6.03 | 389.13 | 98.37 | 231.64 |
| ಚಾಮರಾಜನಗರ | 1 | 5 | 11563 | 21 | 1.75 | 1.68 | 24.16 | 0.31 | 28.73 | 7.01 | 16.86 |
| ಚಿಕ್ಕಮಗಳೂರು | 3 | 5 | 14795 | 36 | 15.29 | 25.48 | 391.07 | 4.72 | 438.62 | 142.24 | 276.66 |
| ದಾವಣಗೇರಿ | 11 | 39 | 72232 | 347 | 47.26 | 302.52 | 2132.52 | 30.19 | 2548.16 | 933.49 | 1354.58 |
| ಧಾರವಾಡ | 10 | 50 | 115321 | 335 | 44.99 | 165.97 | 1158.15 | 7.72 | 1378.03 | 531.30 | 715.53 |
| ಗದಗ | 7 | 12 | 27125 | 90 | 16.82 | 46.87 | 361.65 | 6.31 | 443.98 | 122.78 | 249.85 |
| ಕಲಬುರ್ಗಿ | 9 | 11 | 30941 | 85 | 15.06 | 47.60 | 347.05 | 6.97 | 421.48 | 96.82 | 259.62 |
| ಹಾಸನ | 5 | 7 | 22408 | 58 | 7.90 | 23.10 | 224.43 | 3.09 | 258.71 | 97.79 | 141.32 |
| ಹಾವೇರಿ | 9 | 10 | 28577 | 84 | 10.05 | 79.47 | 358.75 | 7.32 | 461.25 | 136.57 | 256.22 |
| ಕೊಪ್ಪಳ | 6 | 8 | 23160 | 62 | 6.92 | 45.09 | 289.92 | 4.21 | 340.97 | 119.40 | 199.68 |
| ಮಡಿಕೇರಿ | 4 | 4 | 11243 | 31 | 8.05 | 14.24 | 159.39 | 2.10 | 186.33 | 80.86 | 90.45 |
| ಮಂಡ್ಯ | 3 | 3 | 13954 | 19 | 3.80 | 2.76 | 41.85 | 0.09 | 53.58 | 17.48 | 28.30 |
| ಮಂಗಳೂರು | 8 | 53 | 140861 | 334 | 64.50 | 124.37 | 1352.90 | 14.14 | 1564.86 | 569.38 | 870.85 |
| ಮೈಸೂರು | 10 | 24 | 122638 | 295 | 102.94 | 1340.93 | 1950.63 | 25.75 | 2330.45 | 736.01 | 1433.41 |
| ರಾಯಚೂರು | 4 | 44 | 64685 | 379 | 47.15 | 140.63 | 1269.36 | 13.12 | 1456.56 | 449.40 | 538.67 |
| ರಾಮನಗರ | 2 | 2 | 5753 | 11 | 0.88 | 2.33 | 14.14 | 0.06 | 17.83 | 5.82 | 7.64 |
| ಶಿವಮೊಗ್ಗ | 8 | 11 | 45899 | 96 | 24.12 | 57.44 | 545.00 | 8.65 | 657.94 | 190.21 | 390.61 |
| ತುಮಕೂರು | 11 | 62 | 71402 | 426 | 84.95 | 584.12 | 3298.76 | 27.77 | 3949.75 | 1578.05 | 2197.38 |
| ಉತ್ತರ ಕನ್ನಡ | 9 | 51 | 156520 | 410 | 69.14 | 239.90 | 2256.81 | 14.64 | 2627.72 | 1176.55 | 1477.41 |
| ವಿಜಯಪುರ | 18 | 63 | 145954 | 488 | 80.94 | 203.72 | 2173.31 | 11.89 | 2476.60 | 923.13 | 1280.90 |
| ಉಡುಪಿ | 6 | 39 | 72011 | 277 | 68.61 | 136.21 | 1302.75 | 16.02 | 1553.73 | 439.49 | 948.28 |
| ಒಟ್ಟು | 253 | 1,054 | 2,362,974 | 8,400 | 1723.32 | 7624.91 | 47258.28 | 426.71 | 56087.36 | 19745.83 | 29799.71 |

# ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿಯಮಿತ (NAFCUB ನ್ಯಾಫ್‌ಕಬ್)

## ಪಟ್ಟಣ ಸಹಕಾರ ಬ್ಯಾಂಕುಗಳ ವಲಯದ ರಾಷ್ಟ್ರೀಯ ಆಶ್ರಯ ಸಂಸ್ಥೆ ಮೂಲಭೂತ ಪ್ರಶ್ನೆಗಳಿಗೆ ಉತ್ತರ

**ಪ್ರಶ್ನೆ 1. ಆಶ್ರಯ ಸಂಸ್ಥೆ (ಆ.ಸಂ) ಎಂದರೇನು?**

**ಉತ್ತರ:** ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳನ್ನು (ಪತ್ತಿನ ಒಕ್ಕೂಟಗಳು) ಉಳ್ಳ ರಾಷ್ಟ್ರಗಳಲ್ಲಿ ಉದಾ: ಅಮೇರಿಕ, ಕೆನಡಾ, ಆಸ್ಟ್ರೇಲಿಯಾ, ಫ್ರಾನ್ಸ್, ಆಸ್ಟ್ರಿಯಾ, ಇಟಲಿ ಫಿನ್‌ಲ್ಯಾಂಡ್, ಪೋಲಾಂಡ್, ನೆದರ್‌ಲ್ಯಾಂಡ್ಸ್ ಮತ್ತು ಇತರೆ ರಾಷ್ಟ್ರಗಳಲ್ಲಿ ಸಹಕಾರ ಬ್ಯಾಂಕುಗಳು ಉತ್ತುಂಗ ಸಂಸ್ಥೆಯಡಿಯಲ್ಲಿ ತಮ್ಮ ಜಾಲವನ್ನು ನಿರ್ಮಿಸಿಕೊಂಡಿವೆ. ಇದನ್ನು ಆಶ್ರಯ ಸಂಸ್ಥೆ (Umbrella Institution) ಎಂದು ಕರೆಯಲಾಗಿದೆ. ಇದು ವಿಸ್ತಾರವಾದ ಬ್ಯಾಂಕಿಂಗ್ ಮತ್ತು ಹೊಂದಿಕೊಂಡ ಆರ್ಥಿಕ ಸೇವೆಗಳನ್ನು ಒದಗಿಸುತ್ತದೆ. ಅನೇಕ ರಾಷ್ಟ್ರಗಳಲ್ಲಿ ಆಶ್ರಯ ಸಂಸ್ಥೆಯು ಬ್ಯಾಂಕ್ ಆಗಿರುತ್ತದೆ. ಭಾರತದಲ್ಲಿ 1551 ಪಟ್ಟಣ ಸಹಕಾರ ಬ್ಯಾಂಕುಗಳಿದ್ದರೂ ಆ ರೀತಿಯ ಸಂಸ್ಥೆ ಇರುವುದಿಲ್ಲ.

**ಪ್ರಶ್ನೆ 2. ಆಶ್ರಯ ಸಂಸ್ಥೆ ನೀಡುವ ಸೇವೆಗಳಾವುವು?**

**ಉತ್ತರ: ನಿಧಿ ಆಧಾರಿತ ಸೇವೆಗಳು:**

(i) ಸದಸ್ಯ ಬ್ಯಾಂಕುಗಳಿಂದ ಠೇವಣಿ ಸಂಗ್ರಹಣೆ,

(ii) ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯುವುದು.

(iii) ಮಾರುಕಟ್ಟೆಯಿಂದ ಸಾಲಗಳನ್ನು ಪಡೆದು ನಿಧಿಗಳ ಹೆಚ್ಚಳ (ಬಾಂಡ್‌ಗಳು ಮತ್ತು ಬದಲಾವಣೆ ಮಾಡಲಾಗದ ಸಾಲ ಪತ್ರಗಳು)

(iv) ಇತರೆ ಆರ್ಥಿಕ ಸಂಸ್ಥೆಗಳಿಂದ ಪುನರ್ಧನ ಸೌಲಭ್ಯ ಪಡೆಯುವುದು

(v) ಸದಸ್ಯ ಬ್ಯಾಂಕುಗಳಿಗೆ ಸಾಲ ಮತ್ತು ಮುಂಗಡಗಳನ್ನು ಒದಗಿಸುವುದು.

(vi) ಸದಸ್ಯ ಬ್ಯಾಂಕುಗಳಿಗೆ ಪುನರ್ಧನ ಸೌಲಭ್ಯಒದಗಿಸುವುದು.

(vii) ಸದಸ್ಯ ಬ್ಯಾಂಕುಗಳಿಗೆ ಶಾಸನ ಬದ್ಧ ಸೆಕ್ಯೂರಿಟಿ (ಎಸ್.ಎಲ್.ಆರ್).

(viii) ಸದಸ್ಯ ಬ್ಯಾಂಕುಗಳಿಗೆ ಬಂಡವಾಳದ ಬೆಂಬಲ ನೀಡುವುದು

(ix) ಹೆಚ್ಚುವರಿ ನಿಧಿಗಳ ಹೂಡಿಕೆಗೆ ಅವಕಾಶಗಳನ್ನು ಕಲ್ಪಿಸುವುದು.

**ನಿಧಿಯೇತರ ಸೇವೆಗಳು**

(i) ಸದಸ್ಯ ಬ್ಯಾಂಕುಗಳಿಗೆ ಮಾಹಿತಿ ತಂತ್ರಜ್ಞಾನ (ಮಾ.ತಂ) (IT) ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಿಂದ ಸಂಪನ್ಮೂಲಗಳನ್ನು ಹಂಚಿಕೊಂಡು ವೆಚ್ಚ ಕಡಿತಗೊಳಿಸಿ ಹೆಚ್ಚು ದಕ್ಷತೆಯಿಂದ ಸೇವೆ ಒದಗಿಸುವುದು, ಸಲಹೆ ದತ್ತಾಂಶ ಕೇಂದ್ರ ಇದಕ್ಕಾಗಿಯೇ ಮಾಹಿತಿ ತಂತ್ರಜ್ಞಾನ ಜಾಲ ನಿರ್ಮಾಣ.

(ii) ನಿಧಿ ನಿರ್ವಹಣಾ ಸೇವೆ, ಖಜಾನೆ ನಿರ್ವಹಣೆ ಸೇವೆಗಳು,

(iii) ಕಾರ್ಯಕ್ಷೇತ್ರದಲ್ಲಿ ವಿವಿಧ ಸಲಹಾ ಸೇವೆಗಳು,

(iv) ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳು, ತರಬೇತಿ ಕಾರ್ಯಗಾರ ಮತ್ತು ಸಮ್ಮೇಳನಗಳು,

(v) ಮಾನವ ಸಂಪನ್ಮೂಲ ಸೇವೆಗಳು, ಮಾನವ ಶಕ್ತಿ ಯೋಜಿಸುವುದು ಮತ್ತು ನೇಮಕಾತಿ.

(vi) ಸಂಶೋಧನೆ ಮತ್ತು ಅಭಿವೃದ್ಧಿ, ಆಶ್ರಯ ಸಂಸ್ಥೆಯು ಸದಸ್ಯರ ಸ್ವಯಂ ನಿಯಂತ್ರಣ ಪಾತ್ರವನ್ನು ನಿರ್ವಹಿಸುತ್ತದೆ.

**ಪ್ರಶ್ನೆ 3. ದುರ್ಬಲ ಪಟ್ಟಣ ಸಹಕಾರ ಬ್ಯಾಂಕ್‌ಗೆ 'ಆಶ್ರಯ ಸಂಸ್ಥೆ' ಹೇಗೆ ಸಹಾಯ ಮಾಡುತ್ತದೆ?**

**ಉತ್ತರ:** ದುರ್ಬಲವಾಗಿರುವ ಪಟ್ಟಣ ಸಹಕಾರ ಬ್ಯಾಂಕುಗಳ ತೊಂದರೆಗಳ ನಿವಾರಣೆಗೆ ಅನೇಕ ಐಚ್ಛಿಕ ಕ್ರಮಗಳು ಮತ್ತು ಮಾರ್ಗಗಳಿವೆ. ಪುನರ್ ರಚನೆ ಮತ್ತು ಪುನಶ್ಚೇತನದಲ್ಲಿನ ಈ ಪಟ್ಟಣ ಸಹಕಾರ ಬ್ಯಾಂಕು ಉದಾ: ಟ್ಯಾಫ್ ಕಬ್, ಒಗ್ಗೂಡಿಕೆ, ಸ್ವಾದೀನ ಪಡಿಸುವಿಕೆ, ಬದಲಾಯಿಸುವುದು ಇತರೆ ಪರಿಹಾರೋಪಾಯಗಳಿವೆ, ದೌರ್ಬಲ್ಯ ಆರ್ಥಿಕ ಪರಿಸ್ಥಿತಿಯ ಪಟ್ಟಣ ಸಹಕಾರ ಬ್ಯಾಂಕುಗಳ ಪುನರ್ ರಚನೆ ಮತ್ತು ಪುನಶ್ಚೇತನಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸಾಂಸ್ಥಿಕ ತಾಂತ್ರಿಕತೆಯನ್ನು ಹೊಂದಿರುತ್ತದೆ. ಇದು ಬಂಡವಾಳ ವೃದ್ಧಿ ತೊಡಕು ಸಹಿತ ಆಸ್ತಿಗೆ ಬಂಡವಾಳದ ಅನುಪಾತ (CRAR) ಮತ್ತು ನಿವ್ವಳ ಮೌಲ್ಯ (Net worth) ಮತ್ತು

ಸ್ವೈರಣಿಯುತ ಪಟ್ಟಣ ಸಹಕಾರ ಬ್ಯಾಂಕನ್ನು ಲಾಭದಾಯಕವಾಗಿ ಸುಧಾರಣಾ ಕ್ರಮಗಳು, ಸಾಧ್ಯವಿಲ್ಲದವುಗಳನ್ನು ಒಗ್ಗೂಡಿಸುವ ಕ್ರಮಗಳನ್ನು ಕೈಗೊಳ್ಳುತ್ತದೆ. ಏನೇ ಆದರೂಆಶ್ರಯ ಸಂಸ್ಥೆ ಆರಂಭದಲ್ಲಿನ ಮತ್ತು ಪುನಃ ಪುನಃ ಉದ್ಭವಿಸುವ ತೊಂದರೆಗಳಿಗೆ ಸಕಾಲಿಕ ನಿಧಿ ಆಧಾರಿತ, ಸಲಹೆ, ತಾಂತ್ರಿಕ ಸಲಹೆಗಳನ್ನು ದಿವಾಳಿಯಾಗುವ ಮುನ್ನ ಕೈಗೊಳ್ಳುತ್ತದೆ.

**ಪ್ರಶ್ನೆ 4. ರಾಷ್ಟ್ರೀಯ ಆಶ್ರಯ ಸಂಸ್ಥೆ ಸಾಂಸ್ಥಿಕ ಸ್ವರೂಪ ಹೇಗಿರುತ್ತದೆ?**

**ಉತ್ತರ:** ಆರಂಭಿಕವಾಗಿ ಆಶ್ರಯ ಸಂಸ್ಥೆಯು ಠೇವಣಿಯೇತರ ಸಾರ್ವಜನಿಕ ನಿಯಮಿತ ಬ್ಯಾಂಕಿಂಗ್‌ಯೇತರ ಆರ್ಥಿಕ ಕಂಪನಿ (NBFC) (ಸದಸ್ಯರಿಂದ ಠೇವಣಿಗೆ ವಿನಾಯ್ತಿ)ಯ ಸ್ವರೂಪವನ್ನು ಪಡೆದಿರುತ್ತದೆ. ಈ ಕಂಪನಿಯನ್ನು ಪಟ್ಟಣ ಸಹಕಾರ ಬ್ಯಾಂಕುಗಳು ಷೇರು ಬಂಡವಾಳ ಹೂಡಿಕೆ ಮೂಲಕ ಮಾಲೀಕರಾಗಿರುತ್ತಾರೆ. ಬ್ಯಾಂಕಿಂಗ್‌ಯೇತರ ಆರ್ಥಿಕ ಕಂಪನಿ ಸ್ವರೂಪವು ಆಶ್ರಯ ಸಂಸ್ಥೆ ಬಂಡವಾಳ ಸಂಗ್ರಹಣೆ ಮಾಡಲು ಮಾರುಕಟ್ಟೆಯಿಂದ ಹಣತರಲು ಸದಸ್ಯ ಪಟ್ಟಣ ಬ್ಯಾಂಕುಗಳಿಗೆ ಬಂಡವಾಳ ಒದಗಿಸಲು ಮತ್ತು ತನ್ನ ಸ್ವಂತಕ್ಕೆ ಬಳಸಲು ಸಹಕಾರಿಯಾಗುತ್ತದೆ. ಆಶ್ರಯ ಸಂಸ್ಥೆ ಬಲಿಷ್ಠವಾಗುತ್ತಿದ್ದಂತೆ ಹಿಂದಿನ ಕಾರ್ಯಾಚರಣೆ ಅನುಸರಿಸಿ ಇತರೆ ರಾಷ್ಟ್ರಗಳಲ್ಲಿದ್ದಂತೆ ಪೂರ್ಣಾವಧಿ ಬ್ಯಾಂಕ್ ಆಗಿ ಪರಿವರ್ತನೆ ಹೊಂದಬಹುದಾಗಿದೆ.

**ಪ್ರಶ್ನೆ 5. ಆಶ್ರಯ ಸಂಸ್ಥೆ ಬಂಡವಾಳ ರಚನೆ ಹೇಗಿರುತ್ತದೆ ಮತ್ತು ಪ್ರತಿ ಪಟ್ಟಣ ಸಹಕಾರ ಬ್ಯಾಂಕಿನ ವಂತಿಕೆ ಎಷ್ಟು?**

**ಉತ್ತರ:** ಆಶ್ರಯ ಸಂಸ್ಥೆ ಅಧಿಕೃತ ಪಾಲು ಬಂಡವಾಳ ರೂ.500 ಕೋಟಿ. ಈ ಆರಂಭಿಕ ಪಾವತಿಸಿದ ಷೇರು ಬಂಡವಾಳ ರೂ.300 ಕೋಟಿ. ಈ ಆರಂಭಿಕ ಷೇರು ಬಂಡವಾಳವನ್ನು ಚಾಲನ ಸಮಿತಿಯ ಶಿಫಾರಸ್ಸಿನಂತೆ ಪ್ರತಿ ಪಟ್ಟಣ ಸಹಕಾರ ಬ್ಯಾಂಕು ತನ್ನ ಪ್ರತಿ ರೂ.100ರ ಆಸ್ತಿಗೆ ರೂ.0.10 ಪಾವತಿ ಮಾಡಿದರೆ ರೂ.300.ಕೋಟಿ ಸಂಗ್ರಹವಾಗುತ್ತದೆ. ಪ್ರತಿ ಪಟ್ಟಣ ಸಹಕಾರ ಬ್ಯಾಂಕಿನ ಹೊರೆಯನ್ನು ನ್ಯಾಯಯುತ ಸಮಾನ ಸೂತ್ರದ ಆಧಾರದ ಮೇರೆಗೆ ಮಾಡಬಹುದಾಗಿದೆ. ಪ್ರತಿಷ್ಠಿತ ರಾಷ್ಟ್ರೀಯ ಸಹಕಾರ ಸಂಸ್ಥೆ ಮತ್ತು ಆರ್ಥಿಕ ಸಂಸ್ಥೆಗಳಿಂದಲೂ ಸಾಕಷ್ಟು ವಂತಿಗೆ ಮತ್ತು ಬೆಂಬಲ ನಿರೀಕ್ಷಿಸಲಾಗಿದೆ. ಆಶ್ರಯ ಸಂಸ್ಥೆಯ ಯಶಸ್ವಿ ಕಾರ್ಯಚರಣೆಯಿಂದ ಅಂತರರಾಷ್ಟ್ರೀಯ ಆರ್ಥಿಕ ನಿಗಮದಿಂದಲೂ ಪಾವತಿಸಿದ ಷೇರು ಬಂಡವಾಳಕ್ಕೆ ಭಾಗವಹಿಸುವಿಕೆಯನ್ನು ಅವಿಷ್ಕಾರ ಮಾಡಬಹುದಾಗಿದೆ.

**ಪ್ರಶ್ನೆ 6. ಆಶ್ರಯ ಸಂಸ್ಥೆ ದುಡಿಯುವ ಬಂಡವಾಳವನ್ನು ಹೇಗೆ ಕ್ರೋಡೀಕರಣಗೊಳಿಸುತ್ತದೆ?**

**ಉತ್ತರ:** ಬಂಡವಾಳದ ವಂತಿಕೆಯಲ್ಲದೆ ಆಶ್ರಯ ಸಂಸ್ಥೆ ಬ್ಯಾಂಕಿನಿಂದ ಆರ್ಥಿಕ ಸಂಸ್ಥೆಗಳಿಂದ ಪಡೆದ ಸಾಲಗಳಾಗಿ ಸಂಪನ್ಮೂಲ ಸಂಗ್ರಹಣೆ ಮಾಡುತ್ತದೆ. ಬದಲಾವಣೆ ಮಾಡಲಾಗದ ಸಾಲ ಪತ್ರಗಳು, ಆರ್ಥಿಕ ಸಂಸ್ಥೆಗಳಿಂದ ಪುನರ್ಧನ ಸೌಲಭ್ಯ, ಸಾಲ ಠೇವಣಿಅನುಪಾತ (CD Ratio) ಕಡಿಮೆ ಇರುವ ಹೆಚ್ಚಿನ ನಿಧಿ ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಪುನರ್ಧನ ಸೌಲಭ್ಯ ನಿಗಧಿ ಅವಧಿಗೆ ಸಾಕಷ್ಟು ಸಂಪನ್ಮೂಲಗಳು / ಸಾಮರ್ಥ್ಯ ಹೊಂದಿರುವ ಬೃಹತ್ ಸಹಕಾರ ಸಂಸ್ಥೆಗಳಾದ ಇಫ್ಕೋ, ಕ್ರಿಭ್ಕೋ ಸಂಸ್ಥೆಗಳಿಂದ ಪಡೆಯಬಹುದು ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆ ಉದ್ದೇಶದಿಂದ ಆಶ್ರಯ ಸಂಸ್ಥೆ ಫಲಿತವಾಗಿ ತನ್ನ ಹೆಸರನ್ನು ಗಳಿಸುತ್ತದೆಯೋ ಆಗ ಆರ್ಥಿಕ ಸಹಾಯ / ದೇಣಿಗೆಯನ್ನು ಆರ್.ಬಿ.ಐ / ಸರ್ಕಾರದಿಂದಲೂ ಪಡೆಯಬಹುದು.

**ಪ್ರಶ್ನೆ 7. ಸದಸ್ಯತ್ವವು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮಾತ್ರ ಸೀಮಿತವಾಗಿರುತ್ತದೆಯೇ?**

**ಉತ್ತರ:** ಆಶ್ರಯ ಸಂಸ್ಥೆಯು ಕ್ರಮಾಂಕಿತ ಕಂಪನಿಯಾದಾಗ (Listed Company) ಸದಸ್ಯತ್ವವನ್ನುಇತರೆ ಸಹಕಾರ ಸಂಸ್ಥೆಗಳಿಗೂ ಸಾರ್ವಜನಿಕರಿಗೂ ನೀಡಬಹುದಾಗಿದೆ. ಪ್ರಸ್ಥುತ ಕಾಯ್ದೆ ಕಾನೂನುಗಳಿಗನುಗುಣವಾಗಿ ಅದರ ಚೌಕಟ್ಟಿನಲ್ಲಿ ಸದಸ್ಯರು ಅದರ ಸೇವೆಯನ್ನು ಪಡೆಯಬಹುದಾಗಿದೆ. ಆಶ್ರಯ ಸಂಸ್ಥೆಯು ಪ್ರಮುಖವಾಗಿ ಪಟ್ಟಣ ಸಹಕಾರ ಬ್ಯಾಂಕುಗಳ ವಲಯಕ್ಕಾಗಿ ಎಂದು ಆಲೋಚಿಸಿದ್ದರೂ ಗ್ರಾಮೀಣ ಪತ್ತಿನ ಸಂಸ್ಥೆಗಳನ್ನು ಸಶಕ್ತಗೊಳಿಸಬಹುದಾಗಿದೆ.

ಅದರಲ್ಲಿಯೂ ನಿಧಿಗಳ ನಿರ್ವಹಣೆ ಆಸ್ತಿ ಜವಾಬ್ದಾರಿ ವ್ಯವಸ್ಥಾಪನೆ (ALM) ಸಾಮರ್ಥ್ಯಾಭಿವೃದ್ಧಿ, ಮಾಹಿತಿ ತಂತ್ರಜ್ಞಾನ ಅಳವಡಿಕೆ ಸಂಶೋಧನೆ ಮತ್ತು ಅಭಿವೃದ್ಧಿ, ವ್ಯವಸ್ಥಾಪನೆ ಸಲಹೆ ಹಾಗೂ ಇತರೆ ವಲಯಗಳಲ್ಲಿ ಸಶಕ್ತಗೊಳಿಸಬಹುದಾಗಿದೆ. ಅವುಗಳೂ ಈ ಸಂಸ್ಥೆಯ ವೃತ್ತಿಪರ ಚತುರತೆ ಮತ್ತು ಅನುಕೂಲತೆಗಳನ್ನು ಪಡೆಯಬಹುದಾಗಿದೆ.

**ಪ್ರಶ್ನೆ 8. ಆಶ್ರಯ ಸಂಸ್ಥೆಯು ತನ್ನ ಆಧಾಯವನ್ನು ಹೇಗೆ ಗಳಿಸುತ್ತದೆ?**

**ಉತ್ತರ:** ವಾಣಿಜ್ಯ ರೀತಿಯಲ್ಲಿ ನಿಧಿ ಆಧಾರಿತ ಅಥವಾ ನಿಧಿ ಆಧಾರಿತವಲ್ಲದ ಎಲ್ಲ ಸೇವೆಗಳಿಗೆ ಹಣ ನೀಡಬೇಕಾಗುತ್ತದೆ. (ಚಾರ್ಜಬಲ್) ಸಾಲ, ದ್ರವ್ಯ ಆಸ್ತಿ ಬೆಂಬಲ, ಪುನರ್ಧನ ಮುಂತಾದವುಗಳು ಬಡ್ಡಿಯನ್ನು ಗಳಿಸುತ್ತವೆ. ಅಲ್ಲದೆ ಆಶ್ರಯ ಸಂಸ್ಥೆ ತನ್ನ ನಿಧಿಗಳನ್ನು ಆಸ್ತಿಗಳಲ್ಲಿ ಹೂಡಿಕೆ ಮಾಡುತ್ತದೆ. ಅದರಿಂದಲೂ ಆದಾಯ ದೊರೆಯುತ್ತದೆ. ನಿಧಿಯೇತರ ಸೇವೆಗಳಾದ ಮಾಹಿತಿ ತಂತ್ರಜ್ಞಾನ ಸೇವೆಗಳು, ಎ.ಟಿ.ಎಂ. ಜಾಲ ಪಾವತಿ ಮತ್ತು ಸರಿ ಹೊಂದಿಸುವಿಕೆ ಸೇವೆಗಳು, ನಿಧಿಗಳ ನಿರ್ವಹಣೆ, ಸಲಹೆ ಮತ್ತು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳು ಆಶ್ರಯ ಸಂಸ್ಥೆಯ ಶುಲ್ಕ ಆಧಾರಿತ ಸೇವೆಗಳಾಗಿರುತ್ತವೆ. ಷೇರುದಾರರಿಗೆ ಲಾಭದಿಂದ ಪ್ರಸಕ್ತ ಕಾಯ್ದೆ ಕಾನೂನುಗಳಂತೆ ಲಾಭಾಂಶ (ಡಿವಿಡೆಂಡ್) ವಿತರಣೆ ಮಾಡುತ್ತದೆ.

# ಮಹಾಮಂಡಳವು 2022-23ನೇ ಸಾಲಿನಲ್ಲಿ ಜರುಗಿಸಿರುವ ವಿಚಾರ ಸಂಕಿರಣ ಮತ್ತು ತರಬೇತಿ ಶಿಬಿರಗಳ ಛಾಯಾಚಿತ್ರಗಳು










COMMERCIAL BANKS
CORE BANKING
CORPORATE
PRIVATE
CBS


ಬೆಂಗಳೂರು – 560 027






ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,

ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 560 027

ದೂರವಾಣಿ : 080-22233662, 080-22279574 । ಫ್ಯಾಕ್ಸ್ : 080-22220774

ಇ-ಮೇಲ್ : **kscubfed@gmail.com** | ಅಂತರ್ಜಾಲ : **pattanabank.blogspot.com**